ಕರ್ನಾಟಕ ಸರ್ಕಾರ

## ತುಮಕೂರು ಕಂದಾಯ ಆಡಳಿತ

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ



# ಕಲ್ಪತರು ನಾಡಿನ ಕಂದಾಯ ಪರ್ವ

## ಆಡಳಿತಾತ್ಮಕ ಪರಿವರ್ತನೆಯ ಮೈಲಿಗಲ್ಲು



## ಶ್ರೀ ಸಿದ್ದರಾಮಯ್ಯ

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

# ಸನ್ಮಾನ್ಯ ಮುಖ್ಯಮಂತ್ರಿಗಳ ಸಂದೇಶ

ನಮ್ಮ ಸರ್ಕಾರದ ಆಡಳಿತದ ಮೂಲ ಧ್ಯೇಯವೇ ಜನಕೇಂದ್ರಿತ ಸೇವೆ. ಆಡಳಿತವು ಕಚೇರಿಗಳ ಮಟ್ಟದಲ್ಲಿ ಸೀಮಿತವಾಗದೆ, ಜನರ ಮನೆಬಾಗಿಲಿಗೆ ತಲುಪಬೇಕು ಎಂಬ ನಂಬಿಕೆಯಿಂದ ನಾವು ಕಾರ್ಯನಿರ್ವಹಿಸುತ್ತಿದ್ದೇವೆ. ಕಂದಾಯ ಸೇರಿದಂತೆ ವಿವಿಧ ಇಲಾಖೆಗಳ ಸೇವೆಗಳನ್ನು ಸರಳಗೊಳಿಸಿ, ಪಾರದರ್ಶಕತೆ ಮತ್ತು ತ್ವರಿತ ಸ್ಪಂದನೆಯ ಮೂಲಕ ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ. ಹಕ್ಕುಪತ್ರ ವಿತರಣೆ, ಕಂದಾಯ ಗ್ರಾಮ ಹಾಗೂ ಜನಸಂಪರ್ಕ ಕಾರ್ಯಕ್ರಮಗಳ ಮೂಲಕ ಸರ್ಕಾರದ ಸೌಲಭ್ಯಗಳನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪಿಸುವ ಪ್ರಯತ್ನವನ್ನು ನಾವು ನಿರಂತರವಾಗಿ ಮುಂದುವರಿಸುತ್ತಿದ್ದೇವೆ.

ಅಭಿವೃದ್ಧಿಯ ನಿಜವಾದ ಅರ್ಥ ಜನರ ಜೀವನಮಟ್ಟದಲ್ಲಿ ಕಂಡುಬರುವ ಸುಧಾರಣೆಯಲ್ಲಿದೆ. ರೈತರು, ದುರ್ಬಲ ವರ್ಗಗಳು ಮತ್ತು ಗ್ರಾಮೀಣ ಸಮುದಾಯಗಳಿಗೆ ಭದ್ರತೆ ಹಾಗೂ ಅವಕಾಶಗಳನ್ನು ಒದಗಿಸುವುದು ನಮ್ಮ ಬದ್ಧತೆಯಾಗಿದೆ. ಸಮಾನತೆ, ನ್ಯಾಯ ಮತ್ತು ಒಳಗೊಂಡ ಅಭಿವೃದ್ಧಿಯ ಮೂಲಕ ತುಮಕೂರು ಜಿಲ್ಲೆಯನ್ನು ಸಮಗ್ರ ಪ್ರಗತಿಯ ಮಾದರಿಯಾಗಿ ರೂಪಿಸುವ ದಿಕ್ಕಿನಲ್ಲಿ ನಾವು ದೃಢವಾಗಿ ಹೆಜ್ಜೆ ಹಾಕುತ್ತಿದ್ದೇವೆ.



**ಶ್ರೀ ಡಿ. ಕೆ. ಶಿವಕುಮಾರ್**

ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

# ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಸಂದೇಶ

ಜನರ ಬದುಕಿನಲ್ಲಿ ನೈಜ ಬದಲಾವಣೆ ತರಬಲ್ಲ ಆಡಳಿತವೇ ಉತ್ತಮ ಆಡಳಿತ ಎಂದು ನಾನು ನಂಬುತ್ತೇನೆ. ಸರ್ಕಾರದ ಯೋಜನೆಗಳು ಮತ್ತು ಕಂದಾಯ ಸೇವೆಗಳು ಕೇವಲ ಕಚೇರಿಗಳ ಮಟ್ಟದಲ್ಲಿ ಉಳಿಯದೆ, ಪ್ರತಿಯೊಬ್ಬ ನಾಗರಿಕನಿಗೂ ಸುಲಭವಾಗಿ ತಲುಪಬೇಕು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ, ಭೂಮಿ ಹಕ್ಕುಗಳ ಭದ್ರತೆ, ಕುಡಿಯುವ ನೀರಿನ ಯೋಜನೆಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ನಾವು ವಿಶೇಷ ಆದ್ಯತೆ ನೀಡಿದ್ದೇವೆ.

ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಜನಕೇಂದ್ರಿತ ಆಡಳಿತದ ಅತ್ಯುತ್ತಮ ಉದಾಹರಣೆಯಾಗಿದೆ. ನೀರಾವರಿ, ರಸ್ತೆ, ಆರೋಗ್ಯ, ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಕಲ್ಯಾಣ ಕ್ಷೇತ್ರಗಳಲ್ಲಿ ಜಾರಿಗೆ ತಂದಿರುವ ಯೋಜನೆಗಳು ಜಿಲ್ಲೆಯ ಸಮಗ್ರ ಬೆಳವಣಿಗೆಗೆ ಹೊಸ ದಿಕ್ಕು ನೀಡಿವೆ. ಜನರ ವಿಶ್ವಾಸ ಮತ್ತು ಸಹಕಾರವೇ ನಮ್ಮ ಶಕ್ತಿ; ಅಭಿವೃದ್ಧಿಯ ಫಲ ಪ್ರತಿಯೊಂದು ಕುಟುಂಬಕ್ಕೂ ತಲುಪಿಸುವುದು ನಮ್ಮ ಸರ್ಕಾರದ ಬದ್ಧತೆಯಾಗಿದೆ.



**ಶ್ರೀ ವಿ. ಸೋಮಣ್ಣ**

**ಮಾನ್ಯ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರು, ಭಾರತ ಸರ್ಕಾರ
ಹಾಗೂ ಸಂಸದರು, ತುಮಕೂರು ಲೋಕಸಭಾ ಕ್ಷೇತ್ರ**

# ಸಂದೇಶ

ಕಂದಾಯ ಸಮಾವೇಶವು ಕೇವಲ ಆಡಳಿತಾತ್ಮಕ ಕಾರ್ಯಕ್ರಮವಲ್ಲ, ಜನರ ಬದುಕಿಗೆ ಭದ್ರತೆ ಮತ್ತು ಗೌರವ ನೀಡುವ ಜನಪರ ಚಳವಳಿಯಾಗಿದೆ. ದಶಕಗಳಿಂದ ಭೂ ಹಕ್ಕು, ಪೌತಿ ಖಾತೆ, ದಾಖಲೆ ತಿದ್ದುಪಡಿ ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದ ಗ್ರಾಮೀಣ ಕುಟುಂಬಗಳಿಗೆ ಸರ್ಕಾರವೇ ಮನೆಬಾಗಿಲಿಗೆ ತೆರಳಿ ಪರಿಹಾರ ಒದಗಿಸುತ್ತಿರುವುದು ಸುಶಾಸನದ ಹೊಸ ದಿಕ್ಕನ್ನು ತೋರಿಸಿದೆ. ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಕಂದಾಯ ಸೇವೆಗಳನ್ನು ಸರಳ, ಪಾರದರ್ಶಕ ಮತ್ತು ಜನಸ್ನೇಹಿಯಾಗಿ ರೂಪಿಸಿರುವುದು ಶ್ಲಾಘನೀಯ.

ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಕಂದಾಯ ಸಮಾವೇಶವು ಜನಕೇಂದ್ರಿತ ಆಡಳಿತದ ಪರಿಣಾಮಕಾರಿ ಮಾದರಿಯಾಗಿ ಹೊರಹೊಮ್ಮಿದೆ. ಹಕ್ಕುಪತ್ರ ವಿತರಣೆ, ಕಂದಾಯ ಗ್ರಾಮಗಳ ರಚನೆ ಹಾಗೂ ತಂತ್ರಜ್ಞಾನ ಆಧಾರಿತ ಸೇವೆಗಳ ಮೂಲಕ ಸಾವಿರಾರು ಕುಟುಂಬಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಿರುವುದು ಗಮನಾರ್ಹ ಸಾಧನೆ. ಜನರ ವಿಶ್ವಾಸವನ್ನು ಬಲಪಡಿಸುವ ಇಂತಹ ಪ್ರಯತ್ನಗಳು ಸಮಗ್ರ ಅಭಿವೃದ್ಧಿಗೆ ದೃಢವಾದ ಅಡಿಪಾಯವಾಗಲಿದ್ದು, ರಾಜ್ಯದ ಆಡಳಿತ ವ್ಯವಸ್ಥೆಗೆ ಹೊಸ ಪ್ರೇರಣೆಯಾಗಲಿದೆ.



**ಶ್ರೀ ಡಾ. ಜಿ. ಪರಮೇಶ್ವರ**

**ಮಾನ್ಯ ಗೃಹ ಸಚಿವರು ಹಾಗೂ**

**ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ**

# ಸನ್ಮಾನ್ಯ ಗೃಹ ಸಚಿವರ ಸಂದೇಶ

ರಾಜ್ಯದಲ್ಲಿ ಲಂಬಾಣಿ ತಾಂಡಾ ಮತ್ತು ಬೋವಿ ಹಟ್ಟಿಗಳಂತಹ ಪ್ರದೇಶಗಳಲ್ಲಿ ವಾಸಿಸುವ ದುರ್ಬಲ ವರ್ಗದ ಜನರು ದಶಕಗಳಿಂದ ಅಧಿಕೃತ ದಾಖಲೆಗಳಿಲ್ಲದೆ ಬದುಕುತ್ತಿದ್ದರು. ಇಂತಹ ವಸತಿ ಪ್ರದೇಶಗಳನ್ನು 'ಕಂದಾಯ ಗ್ರಾಮಗಳು' ಎಂದು ಘೋಷಿಸುವ ಮೂಲಕ ಅವರಿಗೆ ಸಮಾಜದಲ್ಲಿ ಅಧಿಕೃತ ಸ್ಥಾನಮಾನ ಮತ್ತು ಕಾನೂನುಬದ್ಧ ಭದ್ರತೆಯನ್ನು ನೀಡುವುದು ನಮ್ಮ ಸರ್ಕಾರದ ಮುಖ್ಯ ಉದ್ದೇಶವಾಗಿದೆ.

ತುಮಕೂರು ಜಿಲ್ಲೆಯೊಂದರಲ್ಲೇ ಸುಮಾರು **1,344** ಪ್ರದೇಶಗಳನ್ನು ಕಂದಾಯ ಗ್ರಾಮಗಳು ಮತ್ತು ಉಪಗ್ರಾಮಗಳೆಂದು ಘೋಷಿಸಲಾಗಿದೆ. ಈ ಯೋಜನೆಯಡಿ ನಿವಾಸಿಗಳಿಗೆ ಅವರ ಸ್ವತ್ತುಗಳ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದ್ದು, ಇದರಿಂದ ಅವರಿಗೆ ಸರ್ಕಾರದ ವಿವಿಧ ಸವಲತ್ತುಗಳು ಮತ್ತು ಬ್ಯಾಂಕ್ ಸಾಲದ ಸೌಲಭ್ಯಗಳು ಸುಲಭವಾಗಿ ದೊರೆಯಲಿವೆ. ಎಲ್ಲಕ್ಕಿಂತ ಮಿಗಿಲಾಗಿ, ಈ ಹಕ್ಕುಪತ್ರಗಳು ಅವರು ಸಮಾಜದಲ್ಲಿ ಗೌರವಯುತವಾಗಿ ಬದುಕಲು ಆಸರೆಯಾಗಲಿವೆ.

ರಾಜ್ಯದಲ್ಲೇ ಅತಿ ಹೆಚ್ಚು ಅಂದರೆ **1,344** ಕಂದಾಯ ಗ್ರಾಮಗಳನ್ನು ಘೋಷಿಸಿ, ಸುಮಾರು **22,000** ಜನರಿಗೆ ಹಕ್ಕುಪತ್ರಗಳನ್ನು ವಿತರಿಸುವ ಮೂಲಕ **ತುಮಕೂರು ಜಿಲ್ಲೆಯು ರಾಜ್ಯದಲ್ಲೇ ಪ್ರಥಮ ಸ್ಥಾನ ಗಳಿಸಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ**. ಈ ಐತಿಹಾಸಿಕ ಸಾಧನೆಯ ಹಿಂದೆ ಹಗಲಿರುಳು ಶ್ರಮಿಸಿದ ಜಿಲ್ಲಾಧಿಕಾರಿಗಳ ತಂಡಕ್ಕೆ ಮತ್ತು ಎಲ್ಲಾ ಅಧಿಕಾರಿಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.



## ಶ್ರೀ ಕೃಷ್ಣ ಬೈರೇಗೌಡ

ಸನ್ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ

# ಸನ್ಮಾನ್ಯ ಕಂದಾಯ ಸಚಿವರ ಸಂದೇಶ

ಕಳೆದ ಹತ್ತಾರು ವರ್ಷಗಳಿಂದ ಬಾಕಿ ಉಳಿದಿದ್ದ ಕಂದಾಯ ಇಲಾಖೆಯ ಕೆಲಸಗಳನ್ನು ಗುರುತಿಸಿ, ಅಧಿಕಾರಿಗಳು ಸ್ವಯಂಪ್ರೇರಣೆಯಿಂದ ಜನರ ಮನೆಬಾಗಿಲಿಗೆ ತೆರಳಿ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಈ ಹಿಂದೆ ಐದು ವರ್ಷಗಳಲ್ಲಿ ಕೇವಲ 8,500 ಪೋಡಿಗಳು ದುರಸ್ತಾಗಿದ್ದರೆ, ಕಳೆದ ಒಂದೂವರೆ ವರ್ಷದಲ್ಲಿ 'ನನ್ನ ಭೂಮಿ' ಅಭಿಯಾನದ ಮೂಲಕ ಸುಮಾರು 2.5 ಲಕ್ಷ ರೈತರ ಜಮೀನುಗಳ ಪೋಡಿ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಇದು ದಶಕಗಳಿಂದ ಮಾಲೀಕತ್ವಕ್ಕಾಗಿ ಕಚೇರಿಗಳಿಗೆ ಅಲೆದಾಡುತ್ತಿದ್ದ ರೈತರಿಗೆ ದೊಡ್ಡ ಮಟ್ಟದ ನೆಮ್ಮದಿ ನೀಡಿದೆ.

ಇದರೊಂದಿಗೆ, ಹಕ್ಕುಪತ್ರಗಳಿಲ್ಲದೆ ವಾಸಿಸುತ್ತಿದ್ದ ಸುಮಾರು 2,20,000 ಮನೆಗಳಿಗೆ ಅಧಿಕೃತ ಗ್ರಾಮದ ಮಾನ್ಯತೆ ನೀಡುವ ಐತಿಹಾಸಿಕ ಕಾರ್ಯ ಮಾಡಲಾಗಿದೆ. ಕಂದಾಯ ಗ್ರಾಮ ಯೋಜನೆಯಡಿ 20,000ಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕು ಒದಗಿಸಲಾಗಿದ್ದು, ಸುಮಾರು 80,000 ಕುಟುಂಬಗಳಿಗೆ ವಾರಸುದಾರರ ಹೆಸರಿಗೆ 'ಪೌತಿ ಖಾತೆ' ಮಾಡಿಕೊಡಲಾಗಿದೆ. ಹೀಗೆ ಕಂದಾಯ ಇಲಾಖೆಯು ಪಾರದರ್ಶಕ ಆಡಳಿತದ ಮೂಲಕ ರೈತರ ಮತ್ತು ಸಾರ್ವಜನಿಕರ ಹಿತರಕ್ಷಣೆಗೆ ನಿರಂತರವಾಗಿ ಶ್ರಮಿಸುತ್ತಿದೆ.



**ಶ್ರೀ ಗೋವಿಂದ ಎಂ. ಕಾರಜೋಳ**

**ಸನ್ಮಾನ್ಯ ಸಂಸದರು, ವಿಜಯಪುರ ಲೋಕಸಭಾ ಕ್ಷೇತ್ರ.**
**ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

# ಸಂದೇಶ

ಕಂದಾಯ ಸಮಾವೇಶವು ಕೇವಲ ಆಡಳಿತಾತ್ಮಕ ಕಾರ್ಯಕ್ರಮವಲ್ಲ, ಜನರ ಬದುಕಿಗೆ ಭದ್ರತೆ ಮತ್ತು ಗೌರವ ನೀಡುವ ಜನಪರ ಚಳವಳಿಯಾಗಿದೆ. ದಶಕಗಳಿಂದ ಭೂ ಹಕ್ಕು, ಪೌತಿ ಖಾತೆ, ದಾಖಲೆ ತಿದ್ದುಪಡಿ ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದ ಗ್ರಾಮೀಣ ಕುಟುಂಬಗಳಿಗೆ ಸರ್ಕಾರವೇ ಮನೆಬಾಗಿಲಿಗೆ ತೆರಳಿ ಪರಿಹಾರ ಒದಗಿಸುತ್ತಿರುವುದು ಸುಶಾಸನದ ಹೊಸ ದಿಕ್ಕನ್ನು ತೋರಿಸಿದೆ. ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಕಂದಾಯ ಸೇವೆಗಳನ್ನು ಸರಳ, ಪಾರದರ್ಶಕ ಮತ್ತು ಜನಸ್ನೇಹಿಯಾಗಿ ರೂಪಿಸಿರುವುದು ಶ್ಲಾಘನೀಯ.

ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಕಂದಾಯ ಸಮಾವೇಶವು ಜನಕೇಂದ್ರಿತ ಆಡಳಿತದ ಪರಿಣಾಮಕಾರಿ ಮಾದರಿಯಾಗಿ ಹೊರಹೊಮ್ಮಿದೆ. ಹಕ್ಕುಪತ್ರ ವಿತರಣೆ, ಕಂದಾಯ ಗ್ರಾಮಗಳ ರಚನೆ ಹಾಗೂ ತಂತ್ರಜ್ಞಾನ ಆಧಾರಿತ ಸೇವೆಗಳ ಮೂಲಕ ಸಾವಿರಾರು ಕುಟುಂಬಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಿರುವುದು ಗಮನಾರ್ಹ ಸಾಧನೆ. ಜನರ ವಿಶ್ವಾಸವನ್ನು ಬಲಪಡಿಸುವ ಇಂತಹ ಪ್ರಯತ್ನಗಳು ಸಮಗ್ರ ಅಭಿವೃದ್ಧಿಗೆ ದೃಢವಾದ ಅಡಿಪಾಯವಾಗಲಿದ್ದು, ರಾಜ್ಯದ ಆಡಳಿತ ವ್ಯವಸ್ಥೆಗೆ ಹೊಸ ಪ್ರೇರಣೆಯಾಗಲಿದೆ.



**ಡಾ. ಸಿ. ಎನ್. ಮಂಜುನಾಥ್**

ಸನ್ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಹಾಗೂ ಖ್ಯಾತ ಹೃದ್ರೋಗ ತಜ್ಞರು

# ಸಂದೇಶ

ಕಂದಾಯ ಸಮಾವೇಶವು ಜನರ ಬದುಕಿಗೆ ನೇರವಾಗಿ ಸ್ಪರ್ಶಿಸುವ ಜನಪರ ಆಡಳಿತದ ಅತ್ಯುತ್ತಮ ಉದಾಹರಣೆಯಾಗಿದೆ. ಭೂ ಹಕ್ಕು, ಪೌತಿ ಖಾತೆ, ಕಂದಾಯ ಗ್ರಾಮಗಳ ರಚನೆ ಹಾಗೂ ದಾಖಲೆಗಳ ಸರಳೀಕರಣದ ಮೂಲಕ ಗ್ರಾಮೀಣ ಕುಟುಂಬಗಳಿಗೆ ಕಾನೂನುಬದ್ಧ ಭದ್ರತೆ ಮತ್ತು ಆತ್ಮವಿಶ್ವಾಸ ನೀಡಲಾಗುತ್ತಿದೆ. ಆಡಳಿತವು ಕೇವಲ ಕಚೇರಿಗಳ ಮಟ್ಟದಲ್ಲೇ ಉಳಿಯದೆ, ಜನರ ಮನೆಬಾಗಿಲಿಗೆ ತಲುಪಿ ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸುತ್ತಿರುವುದು ಸುಶಾಸನದ ಹೊಸ ಸಂಸ್ಕೃತಿಯನ್ನು ನಿರ್ಮಿಸಿದೆ.

ತುಮಕೂರು ಜಿಲ್ಲೆಯ ಕಂದಾಯ ಸಮಾವೇಶವು ತಂತ್ರಜ್ಞಾನ ಮತ್ತು ಮಾನವೀಯ ಸ್ಪಂದನೆಯ ಸಮನ್ವಯದ ಮೂಲಕ ಮಾದರಿ ಕಾರ್ಯಕ್ರಮವಾಗಿ ಹೊರಹೊಮ್ಮಿದೆ. ಹಕ್ಕುಪತ್ರ ವಿತರಣೆ, ಭೂ ದಾಖಲೆಗಳ ಡಿಜಿಟಲೀಕರಣ ಹಾಗೂ ಜನಕೇಂದ್ರಿತ ಸೇವೆಗಳ ಮೂಲಕ ಸಾವಿರಾರು ಕುಟುಂಬಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ದೊರೆತಿರುವುದು ಗಮನಾರ್ಹ ಸಾಧನೆ. ಜನರ ಬದುಕಿನಲ್ಲಿ ನೈಜ ಬದಲಾವಣೆ ತರುವ ಇಂತಹ ಕಾರ್ಯಗಳು ಅಭಿವೃದ್ಧಿಯ ಹೊಸ ದಿಕ್ಕನ್ನು ರೂಪಿಸುವುದರೊಂದಿಗೆ, ಆಡಳಿತದ ಮೇಲೆ ಜನರ ವಿಶ್ವಾಸವನ್ನು ಇನ್ನಷ್ಟು ಗಟ್ಟಿಗೊಳಿಸಲಿವೆ.



**ಶ್ರೀ ಟಿ.ಬಿ. ಜಯಚಂದ್ರ**

ಮಾನ್ಯ ಶಾಸಕರು, ಸಿರಾ ವಿ.ಸ. ಕ್ಷೇತ್ರ

# ಸಂದೇಶ

## ಸಿರಾ ತಾಲೂಕಿನ ಜನತೆಯ ದಶಕಗಳ ಕನಸು

ಈ ಹಿಂದೆ ಮಜರೆ ಹಾಗೂ ತಾಂಡಾಗಳಲ್ಲಿ ವಾಸಿಸುತ್ತಿದ್ದ ಕುಟುಂಬಗಳಿಗೆ ಕಾನೂನುಬದ್ಧ ದಾಖಲೆಗಳಿಲ್ಲದೆ ಅನಿಶ್ಚಿತತೆ ಇತ್ತು. ಆದರೆ ಈಗ ಕಂದಾಯ ಇಲಾಖೆಯೇ ಜನರ ಮನೆಬಾಗಿಲಿಗೆ ಬಂದು ಮನೆಗಳನ್ನು ಅಳೆದು, ಡಿಜಿಟಲ್ ತಂತ್ರಜ್ಞಾನದ ಮೂಲಕ ಅಧಿಕೃತ ಹಕ್ಕುಪತ್ರ ಹಾಗೂ **'ಇ-ಸ್ವತ್ತು'** ದಾಖಲೆಗಳನ್ನು ವಿತರಿಸುತ್ತಿದೆ. ಈ ಐತಿಹಾಸಿಕ ಬದಲಾವಣೆಯಿಂದ ಬಡ ಕುಟುಂಬಗಳು ಬ್ಯಾಂಕ್ ಸಾಲ ಪಡೆಯಲು ಮತ್ತು ತಮ್ಮ ಆಸ್ತಿಯ ಹಕ್ಕನ್ನು ಸುಭದ್ರಪಡಿಸಿಕೊಳ್ಳಲು ದಾರಿ ಸುಗಮವಾಗಿದೆ.

ಇದರೊಂದಿಗೆ, ತಲೆಮಾರುಗಳಿಂದ ಬಾಕಿ ಉಳಿದಿದ್ದ ಪೌತಿ ಖಾತೆ ಹಾಗೂ ಪೋಡಿ ದುರಸ್ತಿ ಕಾರ್ಯಗಳನ್ನು ಆಂದೋಲನದ ಮಾದರಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಹಿಂದೆ ಕಚೇರಿಗಳಿಗೆ ಅಲೆದು ದಣಿಯುತ್ತಿದ್ದ ರೈತರಿಗೆ ಅನುಕೂಲವಾಗುವಂತೆ, ಸುಮಾರು 15-20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಅರ್ಜಿಗಳನ್ನು ಕೇವಲ ಕೆಲವೇ ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ತುಮಕೂರು ಜಿಲ್ಲೆಯು ಇಡೀ ರಾಜ್ಯದಲ್ಲೇ ಅತಿ ಹೆಚ್ಚು ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿದ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಈ ಜನಪರ ಆಡಳಿತದ ಮೂಲಕ ಪ್ರತಿಯೊಬ್ಬ ನಾಗರಿಕನಿಗೂ ಅವರ ಭೂಮಿಯ ಮೇಲೆ ಸಂಪೂರ್ಣ ಅಧಿಕಾರ ಮತ್ತು ನೆಮ್ಮದಿಯ ಜೀವನ ಒದಗಿಸುವುದು ನಮ್ಮ ಗುರಿಯಾಗಿದೆ.



**ಶ್ರೀ ಎಸ್.ಆರ್. ಶ್ರೀನಿವಾಸ್**

ಮಾನ್ಯ ಶಾಸಕರು, ಗುಬ್ಬಿ ವಿ.ಸ. ಕ್ಷೇತ್ರ

# ಸಂದೇಶ

## ಬಡವರ ಸ್ವಂತ ಮನೆಯ ಕನಸು ನನಸು

ಗುಬ್ಬಿ ತಾಲೂಕಿನ ಗ್ರಾಮೀಣ ಜನತೆಯ ಆಸ್ತಿ-ಹಕ್ಕುಗಳ ರಕ್ಷಣೆಗೆ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. 'ಕಂದಾಯ ಗ್ರಾಮ' ಯೋಜನೆಯಡಿ ದಶಕಗಳಿಂದ ದಾಖಲೆರಹಿತವಾಗಿದ್ದ ಮಜರೆ ಹಾಗೂ ತಾಂಡಾಗಳ ನಿವಾಸಿಗಳಿಗೆ ಅಧಿಕೃತ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ. ಈ ಐತಿಹಾಸಿಕ ಕ್ರಮದಿಂದ ಬಡ ಕುಟುಂಬಗಳಿಗೆ ತಮ್ಮ ಆಸ್ತಿಯ ಮೇಲೆ ಶಾಶ್ವತ ಮಾಲೀಕತ್ವ ದೊರೆತಿದ್ದು, ಬ್ಯಾಂಕ್ ಸಾಲ ಮತ್ತು ಇತರೆ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಇದ್ದ ಅಡೆತಡೆಗಳು ನಿವಾರಣೆಯಾಗಿವೆ.

ರೈತರ ಹಿತದೃಷ್ಟಿಯಿಂದ ಪೌತಿ ಖಾತೆ ಮತ್ತು ಪೋಡಿ ದುರಸ್ತಿ ಆಂದೋಲನಗಳನ್ನು ಸಮರೋಪಾದಿಯಲ್ಲಿ ನಡೆಸಲಾಗುತ್ತಿದೆ. ಅಧಿಕಾರಿಗಳೇ ನೇರವಾಗಿ ರೈತರ ಮನೆಬಾಗಿಲಿಗೆ ಬಂದು ದಾಖಲೆಗಳನ್ನು ಸರಿಪಡಿಸಿಕೊಡುತ್ತಿರುವುದರಿಂದ, 15-20 ವರ್ಷಗಳಿಂದ ಬಾಕಿ ಉಳಿದಿದ್ದ ಸಾವಿರಾರು ಅರ್ಜಿಗಳು ತ್ವರಿತವಾಗಿ ವಿಲೇವಾರಿಯಾಗುತ್ತಿವೆ. ಈ ಜನಪರ ಕಾರ್ಯಗಳು ರೈತರ ಬದುಕಿನಲ್ಲಿ ನೆಮ್ಮದಿ ಮತ್ತು ಹೊಸ ಭರವಸೆಯನ್ನು ಮೂಡಿಸಿವೆ.



**ಶ್ರೀ ಕೆ. ಎನ್. ರಾಜಣ್ಣ**

ಮಾನ್ಯ ಶಾಸಕರು, ಮಧುಗಿರಿ ವಿ.ಸ. ಕ್ಷೇತ್ರ

# ಸಂದೇಶ

## ಅಂಚಿನಲ್ಲಿರುವ ಸಮುದಾಯಗಳಿಗೆ ಡಿಜಿಟಲ್ ಹಕ್ಕು

ರಾಜ್ಯದ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ ಹಾಗೂ ಆದಿವಾಸಿ ವಸತಿ ಪ್ರದೇಶಗಳನ್ನು 'ಕಂದಾಯ ಗ್ರಾಮ'ಗಳನ್ನಾಗಿ ಪರಿವರ್ತಿಸುವ ಮೂಲಕ ಸರ್ಕಾರವು ದಶಕಗಳ ಕಾಲದ ಸಮಸ್ಯೆಗೆ ಐತಿಹಾಸಿಕ ಪರಿಹಾರ ನೀಡಿದೆ. ಅಧಿಕೃತ ದಾಖಲೆಗಳಿಲ್ಲದೆ ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾಗಿದ್ದ ನಿವಾಸಿಗಳಿಗೆ ಈಗ ಮಾಲೀಕತ್ವದ ಹಕ್ಕು ಸಿಗುತ್ತಿದ್ದು, ತುಮಕೂರು ಜಿಲ್ಲೆಯೊಂದರಲ್ಲೇ ಈಗಾಗಲೇ ಸುಮಾರು 2,479 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಸಿದ್ಧಪಡಿಸಲಾಗಿದೆ. ಸಣ್ಣಪುಟ್ಟ ಹಟ್ಟಿಗಳನ್ನೂ ಈ ವ್ಯಾಪ್ತಿಗೆ ತರುವ ಮೂಲಕ ಪ್ರತಿಯೊಬ್ಬ ಅರ್ಹ ನಿವಾಸಿಗೂ ಭೂಮಿಯ ಹಕ್ಕು ಖಾತ್ರಿಪಡಿಸಲಾಗಿದೆ.

ಈ ಇಡೀ ಪ್ರಕ್ರಿಯೆಯು ಮಧ್ಯವರ್ತಿಗಳ ಹಾವಳಿಯಿಲ್ಲದೆ ಅತ್ಯಂತ ಪಾರದರ್ಶಕವಾಗಿ ಮತ್ತು ಡಿಜಿಟಲ್ ರೂಪದಲ್ಲಿ ನಡೆಯುತ್ತಿದೆ. ಕಂದಾಯ ಅಧಿಕಾರಿಗಳೇ ನೇರವಾಗಿ ಮನೆಬಾಗಿಲಿಗೆ ಭೇಟಿ ನೀಡಿ, ಜಿಪಿಎಸ್ ತಂತ್ರಜ್ಞಾನದ ಮೂಲಕ ಜಾಗ ಗುರುತಿಸಿ ಹಕ್ಕುಪತ್ರಗಳನ್ನು ವಿತರಿಸುತ್ತಿದ್ದಾರೆ. ಫಲಾನುಭವಿಗಳು ಕೇವಲ ಆಧಾರ್ ಮತ್ತು ಒಟಿಪಿ ಬಳಸುವ ಮೂಲಕ ಯಾವುದೇ ಅಡೆತಡೆಯಿಲ್ಲದೆ ನೇರವಾಗಿ ಮಾಲೀಕತ್ವದ ದಾಖಲೆಗಳನ್ನು ಪಡೆಯುತ್ತಿರುವುದು ಈ ಯೋಜನೆಯ ಯಶಸ್ಸಿಗೆ ಮೈಲಿಗಲ್ಲಾಗಿದೆ.



**ಶ್ರೀ ಸುರೇಶ್ ಬಾಬು ಸಿ.ಬಿ.**

ಮಾನ್ಯ ಶಾಸಕರು,
ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ

# ಸಂದೇಶ

## ಅಲೆಮಾರಿ ಗ್ರಾಮಗಳ ಐತಿಹಾಸಿಕ ವಿಮೋಚನೆ

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 5-6 ದಶಕಗಳಿಂದ ಬಾಕಿ ಉಳಿದಿದ್ದ 'ಬೆಚ್ಚರ ಗ್ರಾಮ'ಗಳ ದೀರ್ಘಕಾಲದ ಬೇಡಿಕೆ ಇಂದು ಈಡೇರಿದೆ. ಹಿಂದೆ ಇಡೀ ಊರುಗಳೇ ವೈಯಕ್ತಿಕ ದಾಖಲೆಗಳಲ್ಲಿ ಸಿಲುಕಿದ್ದರಿಂದ, ಸಾವಿರಾರು ನಾಗರಿಕರು ತಮ್ಮದೇ ನೆಲದಲ್ಲಿ ಹಕ್ಕುಚ್ಯುತಿ ಮತ್ತು ಅಭದ್ರತೆಯನ್ನು ಅನುಭವಿಸುತ್ತಿದ್ದರು. ಈ ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸಲು ಕಂದಾಯ ಇಲಾಖೆಯು 19 ಹಳ್ಳಿಗಳನ್ನು ಅಧಿಕೃತ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ್ದು, 2,011 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸುವ ಮೂಲಕ ಅವರ ಬದುಕಿಗೆ ಕಾನೂನುಬದ್ಧ ಭದ್ರತೆಯನ್ನು ಒದಗಿಸಲಾಗಿದೆ.

ಕ್ಷೇತ್ರದಾದ್ಯಂತ ಹರಡಿರುವ ಗೊಲ್ಲರಹಟ್ಟಿಗಳು ಹಾಗೂ ಲಂಬಾಣಿ ತಾಂಡಾಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ನಮ್ಮ ಆಡಳಿತದ ಪರಮೋಚ್ಚ ಸಂಕಲ್ಪವಾಗಿದೆ. ಅರಣ್ಯ ಪ್ರದೇಶದ ಅಂಚಿನಲ್ಲಿ ವಾಸಿಸುವ ಅಲೆಮಾರಿ ಕುಟುಂಬಗಳಿಗೆ ಕೇವಲ ದಾಖಲೆ ನೀಡುವುದಷ್ಟೇ ಅಲ್ಲದೆ, ಅವರಿಗೆ ಅಗತ್ಯವಾದ ರಸ್ತೆ ಸಂಪರ್ಕ, ಕುಡಿಯುವ ನೀರು ಹಾಗೂ ಸುಸಜ್ಜಿತ ಮನೆಗಳನ್ನು ಒದಗಿಸಲಾಗುತ್ತಿದೆ. ಈ ಮೂಲಕ ಪ್ರತಿಯೊಂದು ತಾಂಡಾ ಮತ್ತು ಹಟ್ಟಿಯನ್ನು ಸರ್ವಸೌಲಭ್ಯವುಳ್ಳ 'ಮಾದರಿ ಸ್ವಚ್ಛ ಗ್ರಾಮ'ಗಳನ್ನಾಗಿ ರೂಪಿಸಲು ನಾವು ದೃಢ ಹೆಜ್ಜೆ ಇಟ್ಟಿದ್ದೇವೆ.



**ಶ್ರೀ ಎಂ.ಟಿ. ಕೃಷ್ಣಪ್ಪ**

**ಮಾನ್ಯ ಶಾಸಕರು, ತುರುವೇಕೆರೆ ವಿ.ಸ. ಕ್ಷೇತ್ರ**

# ಸಂದೇಶ

## ತುರುವೇಕೆರೆಯಲ್ಲಿ ರೈತಪರ ಆಡಳಿತ

ತುರುವೇಕೆರೆ ತಾಲೂಕಿನ ಗ್ರಾಮೀಣ ಭಾಗದ ಜನತೆಗೆ ಆಸ್ತಿ ಹಕ್ಕು ಒದಗಿಸುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ. 'ಕಂದಾಯ ಗ್ರಾಮ' ಯೋಜನೆಯ ಮೂಲಕ ತಾಲೂಕಿನ ನೂರಾರು ಮಜರೆ ಹಾಗೂ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ, ದಶಕಗಳಿಂದ ಅತಂತ್ರರಾಗಿದ್ದ ನಿವಾಸಿಗಳಿಗೆ ಅಧಿಕೃತ ಹಕ್ಕುಪತ್ರಗಳನ್ನು ವಿತರಿಸುತ್ತಿದ್ದೇವೆ. ಈ ಯೋಜನೆಯಿಂದಾಗಿ ಬಡ ಕುಟುಂಬಗಳು ತಮ್ಮ ಸ್ವಂತ ಮನೆಯ ಮೇಲೆ ಕಾನೂನುಬದ್ಧ ಮಾಲೀಕತ್ವ ಪಡೆದಿದ್ದು, ಬ್ಯಾಂಕ್ ಸಾಲ ಹಾಗೂ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ದಾರಿ ಸುಗಮವಾಗಿದೆ.

ಇದರೊಂದಿಗೆ, ತಲೆಮಾರುಗಳಿಂದ ನೆನೆಗುದಿಗೆ ಬಿದ್ದಿದ್ದ ಪೌತಿ ಖಾತೆ ಮತ್ತು ಪೋಡಿ ದುರಸ್ತಿ ಕಾರ್ಯಗಳನ್ನು ಸಮರೋಪಾದಿಯಲ್ಲಿ ನಡೆಸಲಾಗುತ್ತಿದೆ. ರೈತರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಅಧಿಕಾರಿಗಳೇ ನೇರವಾಗಿ ರೈತರ ಮನೆಬಾಗಿಲಿಗೆ ಬಂದು ದಾಖಲೆಗಳನ್ನು ಸರಿಪಡಿಸಿಕೊಡುತ್ತಿದ್ದಾರೆ. ಸುಮಾರು 15-20 ವರ್ಷಗಳಿಂದ ಬಾಕಿ ಉಳಿದಿದ್ದ ಸಾವಿರಾರು ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಮೂಲಕ, ರೈತರು ನೆಮ್ಮದಿಯಿಂದ ವ್ಯವಸಾಯ ಮುಂದುವರಿಸಲು ಮತ್ತು ತಮ್ಮ ಭೂ ದಾಖಲೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಸಹಕಾರ ನೀಡುತ್ತಿದ್ದೇವೆ.



**ಶ್ರೀ ಕೆ. ಷಡಕ್ಷರಿ**

ಮಾನ್ಯ ಶಾಸಕರು,
ತಿಪಟೂರು ವಿ.ಸ. ಕ್ಷೇತ್ರ

# ಸಂದೇಶ

## ಗ್ರಾಮೀಣ ಪರಂಪರೆ ಮತ್ತು ಡಿಜಿಟಲ್ ಆಡಳಿತದ ಸಮ್ಮಿಲನ

ಹಲವು ವರ್ಷಗಳಿಂದ ದಾಖಲೆಗಳಿಲ್ಲದ 'ಗ್ರಾಮಠಾಣ' ಪ್ರದೇಶಗಳನ್ನು 'ಕಂದಾಯ ಗ್ರಾಮ'ಗಳನ್ನಾಗಿ ಪರಿವರ್ತಿಸಿ, ನಿವಾಸಿಗಳಿಗೆ ಉಚಿತವಾಗಿ ಹಕ್ಕುಪತ್ರ ಮತ್ತು 'ಇ-ಸ್ವತ್ತು' ನೀಡಲಾಗುತ್ತಿದೆ. ಇದರಿಂದಾಗಿ ಜನರಿಗೆ ತಮ್ಮ ಆಸ್ತಿಯ ಮೇಲೆ ಅಧಿಕೃತ ಹಕ್ಕು ಸಿಕ್ಕಿದ್ದು, ಬ್ಯಾಂಕ್ ಸಾಲ ಹಾಗೂ ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದು ಸುಲಭವಾಗಿದೆ.

ಇದಲ್ಲದೆ, ಕಂದಾಯ ಅಧಿಕಾರಿಗಳೇ ನೇರವಾಗಿ ಜನರ ಮನೆಬಾಗಿಲಿಗೆ ತೆರಳಿ ದಶಕಗಳಿಂದ ಬಾಕಿ ಇದ್ದ 'ಪೌತಿ ಖಾತೆ' ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುತ್ತಿದ್ದಾರೆ. ತುಮಕೂರು ಜಿಲ್ಲೆಯೊಂದರಲ್ಲೇ ದಾಖಲೆಯ 22,000ಕ್ಕೂ ಹೆಚ್ಚು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ಮೂಲಕ ರೈತರ ಬದುಕಿನಲ್ಲಿ ನೆಮ್ಮದಿ ಮತ್ತು ಭರವಸೆಯನ್ನು ಮೂಡಿಸಲಾಗಿದೆ.



**ಶ್ರೀ ಬಿ. ಸುರೇಶ್ ಗೌಡ**

ಮಾನ್ಯ ಶಾಸಕರು, ತುಮಕೂರು
ಗ್ರಾಮಾಂತರ ವಿ.ಸ. ಕ್ಷೇತ್ರ

# ಸಂದೇಶ

## ಗ್ರಾಮೀಣ ಸಬಲೀಕರಣ ಮತ್ತು ಡಿಜಿಟಲ್ ಪಾರದರ್ಶಕತೆ

ಸರ್ಕಾರವು ನಿಯಮ 94-ಡಿ ಅಡಿಯಲ್ಲಿ ಕಂದಾಯ ಗ್ರಾಮಗಳನ್ನು ಘೋಷಿಸುವ ಮೂಲಕ ದಶಕಗಳ ಭೂ-ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುತ್ತಿದೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಮಾರ್ಗದರ್ಶನದಲ್ಲಿ, ಸರ್ಕಾರಿ ಜಮೀನುಗಳಲ್ಲಿ ಮನೆ ಕಟ್ಟಿಕೊಂಡಿರುವ ಬಡ ಕುಟುಂಬಗಳಿಗೆ, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಅಧಿಕೃತ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ. ಈ ಐತಿಹಾಸಿಕ ಕ್ರಮವು ಈ ಹಿಂದೆ ವಂಚಿತವಾಗಿದ್ದ ಪ್ರದೇಶಗಳಿಗೆ ಅಂಗನವಾಡಿ ಮತ್ತು ರಸ್ತೆಗಳಂತಹ ಮೂಲಸೌಕರ್ಯಗಳನ್ನು ಒದಗಿಸಲು ಹಾಗೂ ನಿವಾಸಿಗಳು ಬ್ಯಾಂಕ್ ಸಾಲ ಪಡೆಯಲು ಕಾನೂನುಬದ್ಧ ಅವಕಾಶ ಕಲ್ಪಿಸಿದೆ.

ತುಮಕೂರು ಗ್ರಾಮಾಂತರ ಕ್ಷೇತ್ರದಲ್ಲಿ **180** ಗ್ರಾಮಗಳನ್ನು ಗುರುತಿಸಲಾಗಿದ್ದು, ಈಗಾಗಲೇ 53 ಗ್ರಾಮಗಳ ಪ್ರಕ್ರಿಯೆ ಪೂರ್ಣಗೊಂಡಿದೆ. ಒಟ್ಟು **7,812** ಫಲಾನುಭವಿಗಳ ಪೈಕಿ **953** ಹಕ್ಕುಪತ್ರಗಳ ನೋಂದಣಿ ಪ್ರಗತಿಯಲ್ಲಿದ್ದು, ಕಂದಾಯ ಗ್ರಾಮಗಳ ಘೋಷಣೆಯಲ್ಲಿ ಜಿಲ್ಲೆಯಲ್ಲೇ ಪ್ರಥಮ ಸ್ಥಾನ ಪಡೆದಿರುವ ಈ ಸಾಧನೆ ಗಿನ್ನಿಸ್ ದಾಖಲೆಯತ್ತ ಸಾಗುತ್ತಿದೆ. 'ಪೌತಿ ಖಾತೆ' ಆಂದೋಲನದ ಮೂಲಕ ಆಡಳಿತವನ್ನು ಜನರ ಮನೆಬಾಗಿಲಿಗೆ ಕೊಂಡೊಯ್ದಿರುವ ಈ ಯೋಜನೆಯು ತುಮಕೂರು ಜಿಲ್ಲೆಯ ಸಹಸ್ರಾರು ಕುಟುಂಬಗಳಿಗೆ ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಗೌರವವನ್ನು ತಂದುಕೊಟ್ಟಿದೆ.



## ಶ್ರೀ ಡಾ. ಹೆಚ್.ಡಿ. ರಂಗನಾಥ್

ಮಾನ್ಯ ಶಾಸಕರು, ಕುಣಿಗಲ್ ವಿ.ಸ. ಕ್ಷೇತ್ರ

# ಸಂದೇಶ

## ಕುಣಿಗಲ್ ಕಂದಾಯ ಕ್ರಾಂತಿ ಮತ್ತು ಹಕ್ಕುಪತ್ರ ವಿತರಣೆ

ಕುಣಿಗಲ್ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ವರ್ಷಗಳಿಂದ ಹಕ್ಕುಪತ್ರವಿಲ್ಲದೆ ವಾಸಿಸುತ್ತಿದ್ದ ಜನರಿಗೆ ನಮ್ಮ ಸರ್ಕಾರ 'ಕಂದಾಯ ಗ್ರಾಮ' ಯೋಜನೆಯ ಮೂಲಕ ಬದುಕಿನ ಭರವಸೆ ನೀಡಿದೆ. ಮಜರೆ ಹಾಗೂ ತಾಂಡಾಗಳಲ್ಲಿ ವಾಸವಿರುವ ಬಡ ಕುಟುಂಬಗಳನ್ನು ಗುರುತಿಸಿ, ಅವರ ಮನೆಬಾಗಿಲಿಗೇ ಹೋಗಿ ಸ್ಥಳ ಅಳೆದು ಅಧಿಕೃತ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ. ಈ ಐತಿಹಾಸಿಕ ಬದಲಾವಣೆಯಿಂದಾಗಿ ತಾಲೂಕಿನ ಸಾವಿರಾರು ಕುಟುಂಬಗಳಿಗೆ ತಮ್ಮ ಆಸ್ತಿಯ ಮೇಲೆ ಕಾನೂನುಬದ್ಧ ಹಕ್ಕು ದೊರೆತಂತಾಗಿದೆ.

ಜೊತೆಗೆ, ತಲೆಮಾರುಗಳಿಂದ ಬಾಕಿ ಉಳಿದಿದ್ದ ಪೌತಿ ಖಾತೆ ಮತ್ತು ಪೋಡಿ ದುರಸ್ತಿಯಂತಹ ಕಂದಾಯ ಸಮಸ್ಯೆಗಳನ್ನು ಆಂದೋಲನದ ಮಾದರಿಯಲ್ಲಿ ಬಗೆಹರಿಸುತ್ತಿದ್ದೇವೆ. 15-20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರೈತರ ಭೂ ದಾಖಲೆಗಳನ್ನು ಕೇವಲ ಕೆಲವೇ ದಿನಗಳಲ್ಲಿ ವಿಲೇವಾರಿ ಮಾಡುವ ಮೂಲಕ ಪಾರದರ್ಶಕ ಆಡಳಿತಕ್ಕೆ ಒತ್ತು ನೀಡಲಾಗಿದೆ. ಈ ಜನಪರ ಕಾರ್ಯಕ್ರಮಗಳು ನಮ್ಮ ತಾಲೂಕಿನ ರೈತರು ನೆಮ್ಮದಿಯಿಂದ ವ್ಯವಸಾಯ ಮಾಡಲು ಮತ್ತು ಸರ್ಕಾರಿ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು ಸಹಕಾರಿಯಾಗಿವೆ.



**ಶ್ರೀ ಜಿ. ಬಿ. ಜ್ಯೋತಿ ಗಣೇಶ್**

ಮಾನ್ಯ ಶಾಸಕರು, ತುಮಕೂರು ನಗರ
ವಿ.ಸ. ಕ್ಷೇತ್ರ

# ಸಂದೇಶ

## ದಾಖಲೆ ರಹಿತ ಬದುಕಿಗೆ ಸರ್ಕಾರದಿಂದ ಭದ್ರತೆ

ಕರ್ನಾಟಕ ಸರ್ಕಾರದ ಸಿದ್ಧರಾಮಯ್ಯನವರ ನೇತೃತ್ವದ ಕಂದಾಯ ಇಲಾಖೆಯ ಕೃಷ್ಣ ಬೈರೇಗೌಡರು ಜಾರಿಗೆ ತಂದಿರುವ 'ಕಂದಾಯ ಗ್ರಾಮ' ಯೋಜನೆ ಅತ್ಯಂತ ಶ್ಲಾಘನೀಯವಾದ ಇನಿಷಿಯೇಟಿವ್ ಆಗಿದೆ. ರಾಜ್ಯದಲ್ಲಿ ಹಲವಾರು ದಶಕಗಳಿಂದ ಲಕ್ಷಾಂತರ ಜನರು ತಾವು ವಾಸಿಸುತ್ತಿರುವ ಜಾಗಕ್ಕೆ ಯಾವುದೇ ಅಧಿಕೃತ ದಾಖಲೆಗಳಿಲ್ಲದೆ ಬದುಕುತ್ತಿದ್ದರು. ಅಂತಹವರಿಗೆ ಈಗ ಸರ್ಕಾರವು ಹಕ್ಕುಪತ್ರಗಳನ್ನು ವಿತರಿಸುವ ಮೂಲಕ ಅವರ ಜೀವನಕ್ಕೆ ಒಂದು ಭದ್ರತೆ ಮತ್ತು ದಿಕ್ಕನ್ನು ನೀಡುತ್ತಿದೆ. ಇದು ನಿಜಕ್ಕೂ ಸ್ವಾಗತಾರ್ಹವಾದ ಬದಲಾವಣೆಯಾಗಿದೆ.

ವಿಶೇಷವಾಗಿ ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳ 11 ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 22,000 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡಲಾಗುತ್ತಿದೆ. ತುಮಕೂರು ಜಿಲ್ಲೆಯು ಇಡೀ ರಾಜ್ಯದಲ್ಲೇ ಅತಿ ಹೆಚ್ಚು ಫಲಾನುಭವಿಗಳಿಗೆ ಈ ಯೋಜನೆಯಡಿ ಹಕ್ಕುಪತ್ರಗಳನ್ನು ನೀಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಯಶಸ್ಸಿಗೆ ಕಾರಣರಾದ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಮತ್ತು ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳ ಶ್ರಮವು ಅಭಿನಂದನೀಯ. ಈ ಯೋಜನೆಯು ಬಡವರಿಗೆ ಬ್ಯಾಂಕ್ ಸಾಲ ಪಡೆಯಲು ಮತ್ತು ಆಸ್ತಿಯ ಹಕ್ಕು ಸ್ಥಾಪಿಸಲು ಬಹಳ ಸಹಕಾರಿಯಾಗಿದೆ.



**ಶ್ರೀ ಹೆಚ್.ವಿ. ವೆಂಕಟೇಶ್**

**ಮಾನ್ಯ ಅಧ್ಯಕ್ಷರು, ತುಮಕೂರು ಹಾಲು ಒಕ್ಕೂಟ ಹಾಗೂ**
**ಮಾನ್ಯ ಶಾಸಕರು, ಪಾವಗಡ ವಿ.ಸ. ಕ್ಷೇತ್ರ**

# ಸಂದೇಶ

## ಬಡವರ ಹಿತ ಕಾಯುವ ಜನಪರ ಆಡಳಿತ

ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ, **ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣ ಬೈರೇಗೌಡರ** ನೇತೃತ್ವದಲ್ಲಿ ಅನೇಕ ಬಡವರ ಪರವಾದ ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಇದರ ಪ್ರಮುಖ ಭಾಗವಾಗಿ ರಾಜ್ಯದಾದ್ಯಂತ ಸುಮಾರು 2,600 ಹೊಸ ಪ್ರದೇಶಗಳನ್ನು ಕಂದಾಯ ಗ್ರಾಮಗಳೆಂದು ಗುರುತಿಸಿ, ಅಲ್ಲಿನ ನಿವಾಸಿಗಳಿಗೆ ಅಧಿಕೃತ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ.

ನಮ್ಮ ಪಾವಗಡ ತಾಲ್ಲೂಕಿನಲ್ಲಿ ದಶಕಗಳಿಂದ ಬಾಕಿ ಉಳಿದಿದ್ದ ಪೌತಿ ಖಾತೆ ಮತ್ತು ಭೂ-ದಾಖಲೆಗಳ ಸಮಸ್ಯೆಗಳನ್ನು ಬಗೆಹರಿಸಲು ಕಂದಾಯ ಅಧಿಕಾರಿಗಳು ನೇರವಾಗಿ ಜನರ ಮನೆಬಾಗಿಲಿಗೆ ತೆರಳಿ ಸ್ಪಂದಿಸಿದ್ದಾರೆ. ಈವರೆಗೆ ಸುಮಾರು **4,754** ಕುಟುಂಬಗಳಿಗೆ ಅಧಿಕೃತ ಆಶ್ರಯದ ಭದ್ರತೆಯನ್ನು ಒದಗಿಸಲಾಗಿದೆ. ನಮ್ಮ **ಜಿಲ್ಲಾಧಿಕಾರಿಗಳಾದ ಶುಭ ಕಲ್ಯಾಣ್** ಅವರು ಸ್ವತಃ ಪ್ರತಿ ತಾಲ್ಲೂಕಿಗೂ ಭೇಟಿ ನೀಡಿ ಜನರ ಕುಂದುಕೊರತೆಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸುತ್ತಿರುವುದು ಶ್ಲಾಘನೀಯ. ಸರ್ಕಾರದ ಈ ಸೌಲಭ್ಯಗಳು ತಳಮಟ್ಟದ ಪ್ರತಿಯೊಬ್ಬ ಬಡವರಿಗೂ ತಲುಪುತ್ತಿರುವುದು ನನಗೆ ಅಪಾರ ಸಂತೋಷ ತಂದಿದೆ.



**ಶ್ರೀ ಎಂ. ಮಹೇಶ್**

**ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮ ನಿಯಮಿತ**

# ಸಂದೇಶ

ಕಂದಾಯ ಸಮಾವೇಶವು ಸಮಾಜದ ಅಂಚಿನಲ್ಲಿರುವ ಮತ್ತು ದಶಕಗಳಿಂದ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದ ಕುಟುಂಬಗಳಿಗೆ ಹೊಸ ಆಶಾಕಿರಣವಾಗಿ ಪರಿಣಮಿಸಿದೆ. ವಿಶೇಷವಾಗಿ ಗ್ರಾಮೀಣ ಹಾಗೂ ಹಿಂದುಳಿದ ಸಮುದಾಯಗಳಿಗೆ ಭೂ ಹಕ್ಕು, ಕಂದಾಯ ಗ್ರಾಮಗಳ ಮಾನ್ಯತೆ ಮತ್ತು ಅಧಿಕೃತ ದಾಖಲೆಗಳನ್ನು ಒದಗಿಸುವ ಮೂಲಕ ಸಾಮಾಜಿಕ ಭದ್ರತೆ ಹಾಗೂ ಗೌರವಯುತ ಬದುಕಿಗೆ ಬಲವಾದ ಅಡಿಪಾಯ ಹಾಕಲಾಗಿದೆ. ಸರ್ಕಾರದ ಸೇವೆಗಳು ನೇರವಾಗಿ ಜನರ ಮನೆಬಾಗಿಲಿಗೆ ತಲುಪುತ್ತಿರುವುದು ಜನಪರ ಆಡಳಿತದ ಮಹತ್ವದ ಬೆಳವಣಿಗೆಯಾಗಿದೆ.

ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಕಂದಾಯ ಸಮಾವೇಶವು ಸಮಾನ ಅವಕಾಶ ಮತ್ತು ಸಮಗ್ರ ಅಭಿವೃದ್ಧಿಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಹಕ್ಕುಪತ್ರ ವಿತರಣೆ, ಪೌತಿ ಖಾತೆ ಹಾಗೂ ತಂತ್ರಜ್ಞಾನ ಆಧಾರಿತ ಸೇವೆಗಳ ಮೂಲಕ ಸಾವಿರಾರು ಕುಟುಂಬಗಳ ಬದುಕಿನಲ್ಲಿ ಶಾಶ್ವತ ಬದಲಾವಣೆ ತರಲಾಗುತ್ತಿದೆ. ಜನರ ವಿಶ್ವಾಸವನ್ನು ಬಲಪಡಿಸುವ ಇಂತಹ ಕಾರ್ಯಗಳು ಗ್ರಾಮೀಣ ಸಮಾಜದ ಸಬಲೀಕರಣಕ್ಕೆ ಹೊಸ ದಾರಿಯನ್ನು ತೆರೆದಿದ್ದು, ಭವಿಷ್ಯದ ಅಭಿವೃದ್ಧಿಗೆ ದೃಢವಾದ ನೆಲೆಗಟ್ಟಾಗಲಿವೆ.



## ಶ್ರೀ ಚಿದಾನಂದ ಎಂ. ಗೌಡ

**ಮಾನ್ಯ ಶಾಸಕರು, ವಿಧಾನ ಪರಿಷತ್**

# ಸಂದೇಶ

ಕಂದಾಯ ಸಮಾವೇಶವು ಜನರ ಬಹುಕಾಲದ ಆಡಳಿತಾತ್ಮಕ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ಜನಕೇಂದ್ರಿತ ಕಾರ್ಯಕ್ರಮವಾಗಿ ರೂಪುಗೊಂಡಿದೆ. ಭೂ ಹಕ್ಕು, ಪೌತಿ ಖಾತೆ, ಪೋಡಿ ದುರಸ್ತಿ ಹಾಗೂ ಕಂದಾಯ ಗ್ರಾಮಗಳ ರಚನೆಯಂತಹ ಕಾರ್ಯಗಳ ಮೂಲಕ ಗ್ರಾಮೀಣ ಮತ್ತು ಹಿಂದುಳಿದ ಸಮುದಾಯಗಳಿಗೆ ಕಾನೂನುಬದ್ಧ ಭದ್ರತೆ ಮತ್ತು ಆತ್ಮಗೌರವ ದೊರೆಯುತ್ತಿದೆ. ಸರ್ಕಾರದ ಸೇವೆಗಳು ಜನರ ಮನೆಬಾಗಿಲಿಗೆ ತಲುಪುತ್ತಿರುವುದು ಪಾರದರ್ಶಕ ಮತ್ತು ಸ್ಪಂದನಶೀಲ ಆಡಳಿತದ ಪ್ರತೀಕವಾಗಿದೆ.

ತುಮಕೂರು ಜಿಲ್ಲೆಯ ಕಂದಾಯ ಸಮಾವೇಶವು ಜನಸ್ನೇಹಿ ಆಡಳಿತಕ್ಕೆ ಮಾದರಿಯಾಗಿದ್ದು, ಸಾವಿರಾರು ಕುಟುಂಬಗಳಿಗೆ ಹಕ್ಕುಪತ್ರ ಮತ್ತು ಭೂ ದಾಖಲೆಗಳ ಸುವ್ಯವಸ್ಥೆಯನ್ನು ಒದಗಿಸಿದೆ. ತಂತ್ರಜ್ಞಾನ ಆಧಾರಿತ ಸೇವೆಗಳು ಹಾಗೂ ಸ್ಥಳದಲ್ಲೇ ಸಮಸ್ಯೆ ಪರಿಹಾರ ಕ್ರಮಗಳ ಮೂಲಕ ಜನರ ಬದುಕಿನಲ್ಲಿ ನೈಜ ಬದಲಾವಣೆ ತರಲಾಗುತ್ತಿದೆ. ಸಮಾಜದ ಎಲ್ಲ ವರ್ಗಗಳಿಗೂ ಸಮಾನ ಅವಕಾಶ ಮತ್ತು ಭದ್ರತೆ ಕಲ್ಪಿಸುವ ಇಂತಹ ಯೋಜನೆಗಳು ರಾಜ್ಯದ ಅಭಿವೃದ್ಧಿಗೆ ಬಲವಾದ ಅಡಿಪಾಯವಾಗಲಿವೆ.



**ಶ್ರೀ ರಾಜೇಂದ್ರ ಆರ್.**

ಮಾನ್ಯ ಶಾಸಕರು, ವಿಧಾನ ಪರಿಷತ್

# ಸಂದೇಶ

ಕಂದಾಯ ಸಮಾವೇಶವು ಆಡಳಿತವನ್ನು ಜನರ ಹತ್ತಿರಕ್ಕೆ ತಂದು, ಗ್ರಾಮೀಣ ಕುಟುಂಬಗಳ ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿರುವ ಮಹತ್ವದ ಜನಪರ ಉಪಕ್ರಮವಾಗಿದೆ. ಭೂ ಹಕ್ಕು, ಪೌತಿ ಖಾತೆ, ಕಂದಾಯ ಗ್ರಾಮಗಳ ಘೋಷಣೆ ಹಾಗೂ ದಾಖಲೆಗಳ ಸರಳೀಕರಣದ ಮೂಲಕ ಸಾವಿರಾರು ಜನರಿಗೆ ಕಾನೂನುಬದ್ಧ ಭದ್ರತೆ ಮತ್ತು ಸಾಮಾಜಿಕ ಗೌರವ ದೊರೆಯುತ್ತಿದೆ. ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುತ್ತಿರುವ ಈ ಕಾರ್ಯವೈಖರಿ ಸುಶಾಸನದ ನಿಜವಾದ ಅರ್ಥವನ್ನು ಪ್ರತಿಬಿಂಬಿಸುತ್ತದೆ.

ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಕಂದಾಯ ಸಮಾವೇಶವು ತಂತ್ರಜ್ಞಾನ ಮತ್ತು ಮಾನವೀಯ ಆಡಳಿತದ ಸಮನ್ವಯದ ಮೂಲಕ ಮಾದರಿ ಕಾರ್ಯಕ್ರಮವಾಗಿ ಹೊರಹೊಮ್ಮಿದೆ. ಹಕ್ಕುಪತ್ರ ವಿತರಣೆ ಹಾಗೂ ಪಾರದರ್ಶಕ ಸೇವಾ ವಿತರಣೆಯ ಮೂಲಕ ಜನರ ಬದುಕಿನಲ್ಲಿ ಶಾಶ್ವತ ಬದಲಾವಣೆ ತರಲಾಗುತ್ತಿದೆ. ಜನರ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ಇಂತಹ ಯೋಜನೆಗಳು ಗ್ರಾಮೀಣ ಅಭಿವೃದ್ಧಿ ಮತ್ತು ಸಾಮಾಜಿಕ ಸಬಲೀಕರಣಕ್ಕೆ ಹೊಸ ದಿಕ್ಕನ್ನು ನೀಡಲಿವೆ.



**ಶ್ರೀ ಡಿ.ಟಿ. ಶ್ರೀನಿವಾಸ್**

ಮಾನ್ಯ ಶಾಸಕರು, ವಿಧಾನ ಪರಿಷತ್

# ಸಂದೇಶ

ಕಂದಾಯ ಸಮಾವೇಶವು ಜನರ ಸಮಸ್ಯೆಗಳಿಗೆ ಆಡಳಿತಾತ್ಮಕ ಸ್ಪಂದನೆ ನೀಡುವ ಪರಿಣಾಮಕಾರಿ ವೇದಿಕೆಯಾಗಿದ್ದು, ಗ್ರಾಮೀಣ ಮತ್ತು ಹಿಂದುಳಿದ ಸಮುದಾಯಗಳ ಬದುಕಿನಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ. ಭೂ ಹಕ್ಕು, ಪೌತಿ ಖಾತೆ, ಪೋಡಿ ದುರಸ್ತಿ ಹಾಗೂ ಕಂದಾಯ ಗ್ರಾಮಗಳ ರಚನೆಯಂತಹ ಕಾರ್ಯಕ್ರಮಗಳ ಮೂಲಕ ಜನರಿಗೆ ಕಾನೂನುಬದ್ಧ ಭದ್ರತೆ ಮತ್ತು ಸಾಮಾಜಿಕ ಗೌರವ ದೊರೆಯುತ್ತಿದೆ. ಸರ್ಕಾರದ ಸೇವೆಗಳು ನೇರವಾಗಿ ಜನರ ಮನೆಬಾಗಿಲಿಗೆ ತಲುಪುತ್ತಿರುವುದು ಜನಪರ ಆಡಳಿತದ ಮಹತ್ವದ ಸಾಧನೆಯಾಗಿದೆ.

ತುಮಕೂರು ಜಿಲ್ಲೆಯ ಕಂದಾಯ ಸಮಾವೇಶವು ಪಾರದರ್ಶಕ ಹಾಗೂ ತಂತ್ರಜ್ಞಾನ ಆಧಾರಿತ ಆಡಳಿತದ ಉತ್ತಮ ಮಾದರಿಯಾಗಿ ಹೊರಹೊಮ್ಮಿದೆ. ಹಕ್ಕುಪತ್ರ ವಿತರಣೆ, ದಾಖಲೆಗಳ ಡಿಜಿಟಲೀಕರಣ ಮತ್ತು ಸ್ಥಳದಲ್ಲೇ ಸಮಸ್ಯೆಗಳ ಪರಿಹಾರದ ಮೂಲಕ ಸಾವಿರಾರು ಕುಟುಂಬಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸಲಾಗಿದೆ. ಜನರ ಜೀವನಮಟ್ಟ ಸುಧಾರಣೆಗೆ ದಾರಿ ಮಾಡಿಕೊಡುವ ಇಂತಹ ಕಾರ್ಯಕ್ರಮಗಳು ಸಮಗ್ರ ಅಭಿವೃದ್ಧಿಗೆ ದೃಢವಾದ ನೆಲೆಗಟ್ಟಾಗಲಿವೆ.



**ಶ್ರೀ ರಮೇಶ್ ಬಾಬು**

**ಮಾನ್ಯ ಶಾಸಕರು, ವಿಧಾನ ಪರಿಷತ್**

# ಸಂದೇಶ

ಕಂದಾಯ ಸಮಾವೇಶವು ಕೇವಲ ದಾಖಲೆಗಳ ವಿತರಣೆ ಅಥವಾ ಆಡಳಿತಾತ್ಮಕ ಕಾರ್ಯವಲ್ಲ; ಅದು ಸಾಮಾನ್ಯ ಜನರ ಬದುಕಿನಲ್ಲಿ ನಂಬಿಕೆ ಮತ್ತು ನೆಮ್ಮದಿಯನ್ನು ಪುನಃಸ್ಥಾಪಿಸುವ ಮಹತ್ವದ ಸಾಮಾಜಿಕ ಚಳವಳಿಯಾಗಿದೆ. ಅನೇಕ ವರ್ಷಗಳಿಂದ ತಮ್ಮ ಭೂಮಿ ಮತ್ತು ವಾಸಸ್ಥಳಕ್ಕೆ ಅಧಿಕೃತ ಮಾನ್ಯತೆ ಇಲ್ಲದೆ ಬದುಕುತ್ತಿದ್ದ ಕುಟುಂಬಗಳಿಗೆ ಇಂದು ಸರ್ಕಾರವೇ ಮನೆಬಾಗಿಲಿಗೆ ತೆರಳಿ ಹಕ್ಕು ಮತ್ತು ಗೌರವವನ್ನು ನೀಡುತ್ತಿರುವುದು ಪ್ರಜಾಪ್ರಭುತ್ವದ ನೈಜ ಯಶಸ್ಸಾಗಿದೆ. ಗ್ರಾಮೀಣ ಸಮಾಜದ ಆತ್ಮವಿಶ್ವಾಸವನ್ನು ಹೆಚ್ಚಿಸುವ ಇಂತಹ ಕಾರ್ಯಕ್ರಮಗಳು ಜನರಲ್ಲಿ ಹೊಸ ಭರವಸೆಯನ್ನು ಮೂಡಿಸುತ್ತಿವೆ.

ತುಮಕೂರು ಜಿಲ್ಲೆಯ ಕಂದಾಯ ಸಮಾವೇಶವು ಜನಸೇವೆಯ ಹೊಸ ಪರಿಕಲ್ಪನೆಯನ್ನು ರೂಪಿಸಿದ್ದು, ಆಡಳಿತವು ಜನರೊಂದಿಗೆ ಬೆರೆತು ಕಾರ್ಯನಿರ್ವಹಿಸಿದಾಗ ಎಂತಹ ದೊಡ್ಡ ಪರಿವರ್ತನೆ ಸಾಧ್ಯ ಎಂಬುದಕ್ಕೆ ಜೀವಂತ ಉದಾಹರಣೆಯಾಗಿದೆ. ಹಕ್ಕುಪತ್ರ ವಿತರಣೆ, ಪೌತಿ ಖಾತೆ ಮತ್ತು ತಂತ್ರಜ್ಞಾನ ಆಧಾರಿತ ಸೇವೆಗಳ ಮೂಲಕ ಸಾವಿರಾರು ಕುಟುಂಬಗಳಿಗೆ ಭವಿಷ್ಯದ ಭದ್ರತೆ ಕಲ್ಪಿಸಿರುವುದು ಶ್ಲಾಘನೀಯ ಸಾಧನೆ. ಸಮಾಜದ ಪ್ರತಿಯೊಬ್ಬ ನಾಗರಿಕನಿಗೂ ಗೌರವಯುತ ಬದುಕು ಮತ್ತು ಸಮಾನ ಅವಕಾಶ ಒದಗಿಸುವ ದಿಕ್ಕಿನಲ್ಲಿ ಈ ಪ್ರಯತ್ನಗಳು ಮಹತ್ವದ ಹೆಜ್ಜೆಯಾಗಿವೆ.



**ಶ್ರೀ ರಾಜೇಂದ್ರ ಕುಮಾರ್ ಕಟಾರಿಯಾ,** ಐ.ಎ.ಎಸ್.

**ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,**
**ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ**

# ಸಂದೇಶ

ಕಳೆದ ಮೂರು ವರ್ಷಗಳಲ್ಲಿ ಕಂದಾಯ ಇಲಾಖೆಯು ಅಭೂತಪೂರ್ವ ಕ್ರಾಂತಿಗೆ ಸಾಕ್ಷಿಯಾಗಿದೆ. **2.09 ಲಕ್ಷ ಹಕ್ಕುಪತ್ರಗಳ ವಿತರಣೆ, 2,500 ಹೊಸ ಕಂದಾಯ ಗ್ರಾಮಗಳ ರಚನೆ** ಹಾಗೂ ದಶಕಗಳಿಂದ ಬಾಕಿ ಇದ್ದ **65,000 ಪೋಡಿ ಪ್ರಕರಣಗಳ ವಿಲೇವಾರಿ** ನಮ್ಮ ಜನಪರ ಕಾಳಜಿಗೆ ಹಿಡಿದ ಕೈಗನ್ನಡಿ.

ತಂತ್ರಜ್ಞಾನದ ಸದ್ಬಳಕೆಯೊಂದಿಗೆ **83 ಲಕ್ಷ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ**, ಇಡೀ ಇಲಾಖೆಯನ್ನು ಕಾಗದರಹಿತವಾಗಿಸಿದ್ದೇವೆ. ಎ.ಜೆ.ಎಸ್.ಕೆ ಮೂಲಕ ವಾರ್ಷಿಕ **ಒಂದು ಕೋಟಿಗೂ ಅಧಿಕ ಸೇವೆಗಳನ್ನು** ನೇರವಾಗಿ ಜನರಿಗೆ ತಲುಪಿಸುವ ಮೂಲಕ ಮಧ್ಯವರ್ತಿಗಳ ಹಾವಳಿಯನ್ನು ಮುಕ್ತಗೊಳಿಸಿ, ಪಾರದರ್ಶಕ ಆಡಳಿತಕ್ಕೆ ಮುನ್ನುಡಿ ಬರೆಯಲಾಗಿದೆ.

ನಮ್ಮ ಸಮಸ್ತ ತಂಡದ ಸಂಘಟಿತ ಪ್ರಯತ್ನದಿಂದ ಕಂದಾಯ ವ್ಯವಸ್ಥೆ ಇಂದು ಭ್ರಷ್ಟಾಚಾರ ಮುಕ್ತ ಹಾಗೂ ಜನಸ್ನೇಹಿಯಾಗಿದೆ. ಈ ಡಿಜಿಟಲ್ ಪರ್ವವು ಜನಸಾಮಾನ್ಯರ ಸಬಲೀಕರಣದ ಹಾದಿಯಲ್ಲಿ ಒಂದು ಮೈಲಿಗಲ್ಲಾಗಿದ್ದು, ಸುವ್ಯವಸ್ಥಿತ ಆಡಳಿತ ನೀಡುವ ನಮ್ಮ ಬದ್ಧತೆ ಎಂದಿನಂತೆ ಮುಂದುವರಿಯಲಿದೆ.



**ಶ್ರೀ ಅಮ್ಲಾನ್ ಆದಿತ್ಯ ಬಿಸ್ವಾಸ್,** ಐ.ಎ.ಎಸ್.

**ಪ್ರಾದೇಶಿಕ ಆಯುಕ್ತರು**

# ಸಂದೇಶ

ಕಂದಾಯ ಸಮಾವೇಶವು ಜನಸ್ನೇಹಿ ಆಡಳಿತದ ಪರಿಣಾಮಕಾರಿ ರೂಪವಾಗಿದ್ದು, ಸರ್ಕಾರದ ಸೇವೆಗಳನ್ನು ನೇರವಾಗಿ ಜನರ ಮನೆಬಾಗಿಲಿಗೆ ತಲುಪಿಸುವ ಮಹತ್ವದ ಹೆಜ್ಜೆಯಾಗಿದೆ. ಭೂ ಹಕ್ಕು, ಪೌತಿ ಖಾತೆ, ಕಂದಾಯ ಗ್ರಾಮಗಳ ರಚನೆ ಹಾಗೂ ದಾಖಲೆಗಳ ಸರಳೀಕರಣದ ಮೂಲಕ ಗ್ರಾಮೀಣ ಮತ್ತು ಹಿಂದುಳಿದ ಸಮುದಾಯಗಳಿಗೆ ಕಾನೂನುಬದ್ಧ ಭದ್ರತೆ ಒದಗಿಸಲಾಗುತ್ತಿದೆ. ಆಡಳಿತದಲ್ಲಿ ಪಾರದರ್ಶಕತೆ, ತ್ವರಿತ ಸ್ಪಂದನೆ ಮತ್ತು ತಂತ್ರಜ್ಞಾನದ ಸಮರ್ಪಕ ಬಳಕೆ ಮೂಲಕ ಜನರ ವಿಶ್ವಾಸವನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ.

ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಕಂದಾಯ ಸಮಾವೇಶವು ಸಮಗ್ರ ಅಭಿವೃದ್ಧಿ ಮತ್ತು ಸುಶಾಸನದ ಉತ್ತಮ ಮಾದರಿಯಾಗಿ ಹೊರಹೊಮ್ಮಿದೆ. ಹಕ್ಕುಪತ್ರ ವಿತರಣೆ, ಭೂ ದಾಖಲೆಗಳ ಡಿಜಿಟಲೀಕರಣ ಹಾಗೂ ಸ್ಥಳದಲ್ಲೇ ಸಮಸ್ಯೆಗಳ ಪರಿಹಾರದ ಮೂಲಕ ಸಾವಿರಾರು ಕುಟುಂಬಗಳ ಬದುಕಿನಲ್ಲಿ ಶಾಶ್ವತ ಬದಲಾವಣೆ ತರಲಾಗಿದೆ. ಜನರ ಅಗತ್ಯಗಳಿಗೆ ಸ್ಪಂದಿಸುವ ಇಂತಹ ಆಡಳಿತಾತ್ಮಕ ಉಪಕ್ರಮಗಳು ಸಮಾಜದಲ್ಲಿ ಸಮಾನತೆ, ಭದ್ರತೆ ಮತ್ತು ಅಭಿವೃದ್ಧಿಯ ಹೊಸ ದಾರಿಯನ್ನು ನಿರ್ಮಿಸಲಿವೆ.



**ಶ್ರೀಮತಿ ಮೀನಾ ನಾಗರಾಜ್, ಭಾ.ಆ.ಸೇ**

ಮಾನ್ಯ ಕಂದಾಯ ಆಯುಕ್ತರು, ಕರ್ನಾಟಕ ಸರ್ಕಾರ

# ಸಂದೇಶ

ಕಳೆದ ಮೂರು ವರ್ಷಗಳಲ್ಲಿ ಕಂದಾಯ ಇಲಾಖೆ ಜನರ ಮನೆಬಾಗಿಲಿಗೆ ಸೇವೆ ತಲುಪಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. 'ಭೂ ಸುರಕ್ಷಾ' ಯೋಜನೆಯಡಿ 71 ಕೋಟಿ ದಾಖಲೆಗಳ ಡಿಜಿಟಲೀಕರಣ, 'ಇ-ಪೌತಿ' ಹಾಗೂ 'ದಾರ್ ಕಾಸ್ತು ಅಭಿಯಾನ'ಗಳ ಮೂಲಕ ರೈತರ ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾಗಿದೆ. ಇದೇ ಅವಧಿಯಲ್ಲಿ 2 ಲಕ್ಷ ಹಕ್ಕುಪತ್ರಗಳನ್ನು ವಿತರಿಸಲಾಗಿದ್ದು, ಖಅಅಒಖ ಮೂಲಕ ಸಾವಿರಾರು ಕಂದಾಯ ನ್ಯಾಯಾಲಯ ಪ್ರಕರಣಗಳ ತ್ವರಿತ ವಿಲೇವಾರಿ ಸಾಧ್ಯವಾಗಿದೆ.

ತಂತ್ರಜ್ಞಾನ ಬಳಕೆಯಿಂದ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ವೇಗ ಹೆಚ್ಚಿದ್ದು, ನಾಗರಿಕರಿಗೆ ಸುಲಭ ಸೇವೆ ಒದಗಿಸುವಲ್ಲಿ ಇಲಾಖೆ ಬದ್ಧವಾಗಿದೆ. ಮುಂದಿನ ದಿನಗಳಲ್ಲಿ ಸಂಪೂರ್ಣ ಕಾಗದರಹಿತ ಮತ್ತು ಜನಕೇಂದ್ರಿತ ಕಂದಾಯ ಆಡಳಿತ ನಿರ್ಮಾಣವೇ ನಮ್ಮ ಗುರಿಯಾಗಿದೆ.



**ಶ್ರೀ ವೆಂಕಟ್ ರಾಜ , ಭಾ.ಆ.ಸೇ**

ಸರ್ವೆ, ಸೆಟಲ್‌ಮೆಂಟ್ ಮತ್ತು ಭೂ ದಾಖಲೆಗಳ
ಆಯುಕ್ತರು, ಕರ್ನಾಟಕ ಸರ್ಕಾರ

# ಸಂದೇಶ

ಭೂ ದಾಖಲೆಗಳ ನಿಖರತೆ ಮತ್ತು ಪಾರದರ್ಶಕತೆ ಗ್ರಾಮೀಣ ಆಡಳಿತದ ಬಲವಾದ ಅಡಿಪಾಯವಾಗಿದೆ. ಕಂದಾಯ ಸಮಾವೇಶದ ಮೂಲಕ ಭೂ ಸರ್ವೆ, ಪೋಡಿ ದುರಸ್ತಿ, ಪೌತಿ ಖಾತೆ ಮತ್ತು ಹಕ್ಕುಪತ್ರ ವಿತರಣೆಯಂತಹ ಪ್ರಮುಖ ಕಾರ್ಯಗಳನ್ನು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸಲಾಗುತ್ತಿರುವುದು ಶ್ಲಾಘನೀಯ ಸಾಧನೆ. ತಂತ್ರಜ್ಞಾನ ಆಧಾರಿತ ಭೂಮಾಪನ, ಡಿಜಿಟಲ್ ದಾಖಲೆಗಳ ನಿರ್ವಹಣೆ ಹಾಗೂ ಸ್ಥಳದಲ್ಲೇ ಸಮಸ್ಯೆಗಳ ಪರಿಹಾರ ಕ್ರಮಗಳು ಜನರಲ್ಲಿ ಆಡಳಿತದ ಮೇಲಿನ ವಿಶ್ವಾಸವನ್ನು ಹೆಚ್ಚಿಸಿವೆ.

ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಈ ಕಂದಾಯ ಅಭಿಯಾನವು ಭೂ ದಾಖಲೆಗಳ ಸುವ್ಯವಸ್ಥೆ ಮತ್ತು ಜನಸೇವೆಯ ಸಮನ್ವಯದ ಉತ್ತಮ ಮಾದರಿಯಾಗಿದೆ. ದಶಕಗಳಿಂದ ಬಾಕಿ ಉಳಿದಿದ್ದ ಭೂ ಸಂಬಂಧಿತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ಮೂಲಕ ಸಾವಿರಾರು ಕುಟುಂಬಗಳಿಗೆ ಕಾನೂನುಬದ್ಧ ಭದ್ರತೆ ಮತ್ತು ಆರ್ಥಿಕ ಸ್ಥಿರತೆ ಕಲ್ಪಿಸಲಾಗಿದೆ. ಆಡಳಿತ ಮತ್ತು ತಂತ್ರಜ್ಞಾನ ಒಟ್ಟಾಗಿ ಕೆಲಸ ಮಾಡಿದಾಗ ಜನರ ಬದುಕಿನಲ್ಲಿ ಎಂತಹ ಮಹತ್ವದ ಪರಿವರ್ತನೆ ಸಾಧ್ಯ ಎಂಬುದನ್ನು ಈ ಕಾರ್ಯಕ್ರಮ ಸ್ಪಷ್ಟವಾಗಿ ತೋರಿಸಿದೆ.



**ಶ್ರೀಮತಿ ಶುಭ ಕಲ್ಯಾಣ್,** ಭಾ.ಆ.ಸೇ

ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ

# ಸಂದೇಶ

ಶಿರಾ ತಾಲ್ಲೂಕಿನ ಹುಣಸೆಹಳ್ಳಿ ಗ್ರಾಮದ ಭೇಟಿಯ ಸಂದರ್ಭದಲ್ಲಿ, ದಶಕಗಳಿಂದ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದ ಗ್ರಾಮಸ್ಥರ ನೋವು ಮತ್ತು ಆ ಗ್ರಾಮವಿನ್ನೂ 'ಕಂದಾಯ ಗ್ರಾಮ'ವಾಗಿ ಘೋಷಣೆಯಾಗದಿರುವುದನ್ನು ಗಮನಿಸಲಾಯಿತು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಕಂದಾಯ ಮತ್ತು ಗೃಹ ಸಚಿವರ ಮಾರ್ಗದರ್ಶನದಲ್ಲಿ ಕಳೆದ ಒಂದು ವರ್ಷದಿಂದ ನಿರಂತರವಾಗಿ ಶ್ರಮಿಸಿ, ಹುಣಸೆಹಳ್ಳಿ ಸೇರಿದಂತೆ ಜಿಲ್ಲೆಯಾದ್ಯಂತ ಕಂದಾಯ ಗ್ರಾಮಗಳ ರಚನಾ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಕೇವಲ ಎರಡು ತಿಂಗಳ ಆಂದೋಲನ ಮಾದರಿಯ ಶ್ರಮದಿಂದಾಗಿ ಜಿಲ್ಲೆಯಲ್ಲಿ ಒಟ್ಟು **1100** ಹೊಸ ಕಂದಾಯ ಗ್ರಾಮಗಳ ಗುರಿಯೊಂದಿಗೆ ಸದ್ಯ **847** ಗ್ರಾಮಗಳನ್ನು ಯಶಸ್ವಿಯಾಗಿ ರಚಿಸಲಾಗಿದೆ. ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್ ಸೇರುವ ಹಾದಿಯಲ್ಲಿರುವ ಈ ಐತಿಹಾಸಿಕ ಸಾಧನೆಯು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರ ಸಕ್ರಿಯ ಸಹಕಾರ ಮತ್ತು ಕಂದಾಯ ಇಲಾಖೆಯ ಸಿಬ್ಬಂದಿಯ ಶ್ರಮದ ಫಲವಾಗಿದೆ. ಜನಸಾಮಾನ್ಯರಿಗೆ ಸಮಾನ ಹಕ್ಕು ಮತ್ತು ನ್ಯಾಯ ಒದಗಿಸುವ ಈ ಕಾರ್ಯವು ಅತ್ಯಂತ ಆತ್ಮ ತೃಪ್ತಿ ನೀಡಿದೆ.



**ಡಾ. ಎನ್. ತಿಪ್ಪೇಸ್ವಾಮಿ, ಕೆ.ಎ.ಎಸ್.**

**ಮಾನ್ಯ ಅಪರ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ**

# ಸಂದೇಶ

ಸ್ವಾತಂತ್ರ್ಯ ಪೂರ್ವ ಮತ್ತು ನಂತರ ಮಂಜೂರಾದ ಜಮೀನುಗಳ ನೈಜತೆಯನ್ನು ಪರಿಶೀಲಿಸಿ, ಅಳತೆ ಮಾಡುವ ಮೂಲಕ ಬಾಂದ್ ಕಲ್ಲುಗಳನ್ನು ಅಳವಡಿಸಿ ದಾಖಲೆಗಳನ್ನು ನೀಡುವ ಕಂದಾಯ ಇಲಾಖೆಯ ಕ್ರಮವು ಶ್ಲಾಘನೀಯ. ಹಲವು ದಶಕಗಳಿಂದ ಬಾಕಿ ಇದ್ದ ಈ ದುರಸ್ತಿ ಕಾರ್ಯಕ್ಕೆ ಸರ್ಕಾರವು ದಿಟ್ಟ ಚಾಲನೆ ನೀಡಿದೆ.

ಜಿಲ್ಲೆಯ ಕಂದಾಯ ಇಲಾಖೆಯ ಸಿಬ್ಬಂದಿಗಳು ಅರ್ಜಿ ರಹಿತವಾಗಿ ತಂತ್ರಾಂಶದ ಮೂಲಕ ಮೃತರ ಹೆಸರಲ್ಲಿದ್ದ ಪಹಣಿಗಳನ್ನು ಅವರ ನೈಜ ವಾರಸುದಾರರಿಗೆ ವರ್ಗಾಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಸುಮಾರು ೮೦,೦೦೦ಕ್ಕೂ ಹೆಚ್ಚು ಸರ್ವೆ ನಂಬರ್‌ಗಳಿಗೆ 'ಪೌತಿ ಖಾತೆ' ಮಾಡಿಕೊಟ್ಟಿರುವುದು ಇಲಾಖೆಯ ಅತ್ಯಂತ ಗಮನಾರ್ಹ ಪ್ರಗತಿಯಾಗಿದೆ.



**ಶ್ರೀಮತಿ ಭಾವನಾ ಬಸವರಾಜ್**

ಮಾನ್ಯ ಭೂ ದಾಖಲೆಗಳ ಉಪ ನಿರ್ದೇಶಕರು, ತುಮಕೂರು ಜಿಲ್ಲೆ

ಕಂದಾಯ ಗ್ರಾಮ ಯೋಜನೆಯಡಿ ತುಮಕೂರು ಜಿಲ್ಲೆಯ 1307 ದಾಖಲೆರಹಿತ ಜನವಸತಿ ಪ್ರದೇಶಗಳಿಗೆ ಅಧಿಕೃತ ಮಾನ್ಯತೆ ನೀಡಲಾಗಿದೆ.

22064 ಕುಟುಂಬಗಳಿಗೆ ಮಾಲೀಕತ್ವದ ಹಕ್ಕು ಹಾಗೂ ದರಖಾಸ್ತು ಪೋಡಿ ಆಂದೋಲನದಡಿ 6300 ರೈತರಿಗೆ ಕಾನೂನುಬದ್ಧ ಭೂ ದಾಖಲೆಗಳನ್ನು ಕಲ್ಪಿಸಲಾಗಿದೆ.

ರೈತರ ಭೂಮಿಗೆ ಶಾಶ್ವತ ಪರಿಹಾರ ಒದಗಿಸುವ ದಿಶೆಯಲ್ಲಿ ಜಿಲ್ಲಾಡಳಿತ ಮಹತ್ವದ ಪರಿವರ್ತನೆ ತಂದಿದೆ.



**ಗೋಟೂರು ಶಿವಪ್ಪ**

ಮಾನ್ಯ ಅಸಿಸ್ಟೆಂಟ್ ಕಮಿಷನರ್, ಮಧುಗಿರಿ ಉಪ ವಿಭಾಗ

ಕರ್ನಾಟಕ ಸರ್ಕಾರದ 'ಕಂದಾಯ ಗ್ರಾಮ' ಯೋಜನೆಯಡಿ ಮಜರೆ ಮತ್ತು ತಾಂಡಾ ನಿವಾಸಿಗಳಿಗೆ ಮನೆಬಾಗಿಲಲ್ಲೇ ಆನ್‌ಲೈನ್ ಹಕ್ಕುಪತ್ರಗಳನ್ನು ವಿತರಿಸಲಾಗಿದೆ.

ದಶಕಗಳಿಂದ ವಂಚಿತರಾಗಿದ್ದ ಜನರಿಗೆ ಅಧಿಕೃತ ವಿಳಾಸ ಮತ್ತು ಆಸ್ತಿ ಭದ್ರತೆ ದೊರಕಿದೆ.

ತುಮಕೂರು ಜಿಲ್ಲೆಯೊಂದರಲ್ಲೇ ಒಂದು ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿರುವುದು ಮಹತ್ವದ ಮೈಲಿಗಲ್ಲಾಗಿದೆ.



**ನಹಿದಾ ಝುಮ್ ಝುಮ್**

ಮಾನ್ಯ ಅಸಿಸ್ಟೆಂಟ್ ಕಮಿಷನರ್ ತುಮಕೂರು ಉಪ ವಿಭಾಗ

ತುಮಕೂರು ಉಪವಿಭಾಗವು ಜಿಲ್ಲಾಡಳಿತದ ಸಹಯೋಗದೊಂದಿಗೆ ಕಂದಾಯ ಸೇವೆಗಳನ್ನು ಜನರ ಮನೆಬಾಗಿಲಿಗೆ ತಲುಪಿಸುತ್ತಿದೆ.

'ಪೌತಿ ಖಾತೆ' ಮತ್ತು 'ಕಂದಾಯ ಗ್ರಾಮ' ಯೋಜನೆಗಳಡಿ ಸಾವಿರಾರು ಫಲಾನುಭವಿಗಳಿಗೆ ಹಕ್ಕುಪತ್ರ ಹಾಗೂ ಇ-ಸ್ವತ್ತು ದಾಖಲೆಗಳನ್ನು ವಿತರಿಸಲಾಗಿದೆ.

'ಪಂತಿ ಅದಾಲತ್' ಮೂಲಕ ಭೂ ಸಂಬಂಧಿತ ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸಿ ಪಾರದರ್ಶಕ ಆಡಳಿತಕ್ಕೆ ಆದ್ಯತೆ ನೀಡಲಾಗಿದೆ.



**ಸಪ್ತಶ್ರೀ ಬಿ.ಕೆ**

ಮಾನ್ಯ ಅಸಿಸ್ಟೆಂಟ್ ಕಮಿಷನರ್, ತಿಪಟೂರು ಉಪ ವಿಭಾಗ

ಕಳೆದ ಎರಡು ವರ್ಷಗಳಲ್ಲಿ ನಮ್ಮ ಉಪವಿಭಾಗದಲ್ಲಿ ಕಂದಾಯ ಆಡಳಿತವನ್ನು ಜನಮುಖಿಯಾಗಿಸಲಾಗಿದೆ.

'ಕಂದಾಯ ಗ್ರಾಮ' ಯೋಜನೆಯಡಿ 5,491 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ.

ಇದಲ್ಲದೆ, 19,237 ಪೌತಿ ಖಾತೆ ಹಾಗೂ 1,781 ಪೋಡಿ ದುರಸ್ತಿ ಕಾರ್ಯಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾಗಿದೆ.

# ಭೂಮಿ ಎಂದರೆ ಬರಿ ಮಣ್ಣಲ್ಲ...

## ನಮ್ಮ ಭೂಮಿ, ನಮ್ಮ ಹೆಮ್ಮೆ

ಪ್ರತಿ ಗ್ರಾಮದಲ್ಲೂ ಭೂಮಿ ಎಂಬುದು ಕೇವಲ ಮಣ್ಣಲ್ಲ; ಅದು ಒಬ್ಬ ವ್ಯಕ್ತಿಯ ಅಸ್ಮಿತೆ, ಭದ್ರತೆ ಮತ್ತು ಆತ್ಮಗೌರವದ ಪ್ರತೀಕ. ಆದರೆ ಅನೇಕ ವರ್ಷಗಳಿಂದ ತುಮಕೂರು ಜಿಲ್ಲೆಯ ಸಾವಿರಾರು ಕುಟುಂಬಗಳು ಭೂಮಿಯ ಮೇಲಿನ ಅಧಿಕೃತ ಹಕ್ಕುಸ್ವಾಮ್ಯವಿಲ್ಲದೆ ಆತಂಕದಲ್ಲಿ ಬದುಕುತ್ತಿದ್ದರು.

ಅಪೂರ್ಣ ದಾಖಲೆಗಳು ಮತ್ತು ಕಚೇರಿಗಳ ವಿಳಂಬದಿಂದಾಗಿ ಜನರ ಬದುಕು ಕಷ್ಟಕರವಾಗಿತ್ತು. ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಬೇಕಾದ ದಾಖಲೆಗಳಿಲ್ಲದೆ ಅರ್ಹ ನಾಗರಿಕರು ಅವಕಾಶಗಳಿಂದ ವಂಚಿತರಾಗುತ್ತಿದ್ದರು. ಈ ಕಂದಾಯದ ಅಡೆತಡೆಗಳನ್ನು ನಿವಾರಿಸಿ, ಆಡಳಿತವನ್ನು ಜನರ ಮನೆಬಾಗಿಲಿಗೆ ತರುವುದೇ 'ಕಂದಾಯ ಸಮಾವೇಶ' ದ ಮುಖ್ಯ ಉದ್ದೇಶವಾಗಿದೆ.



ಭೂಮಿ ಹಕ್ಕು · ಸುರಕ್ಷಿತ ಜೀವನ · ಆತ್ಮ ಗೌರವ · ಉಜ್ವಲ ಭವಿಷ್ಯ



"ತುಮಕೂರು ಕಂದಾಯ ಆಡಳಿತ: ಜನರ ಮನೆಯ ಬಾಗಿಲಿಗೆ"

# ಆಡಳಿತದ ಹೊಸ ಆಯಾಮ

## ಕಾಗದದ ದಾಖಲೆಗಳಿಂದ ದೃಢವಾದ ಅಸ್ಮಿತೆಯತ್ತ

ಸಮರ್ಥ ಆಡಳಿತ ಮತ್ತು ಆಧುನಿಕ ತಂತ್ರಜ್ಞಾನದ ಸಮನ್ವಯದಿಂದಾಗಿ, ದಶಕಗಳಿಂದ ಬಾಕಿ ಉಳಿದಿದ್ದ ಕಂದಾಯದ ಸಂಕೀರ್ಣ ಸವಾಲುಗಳಿಗೆ ಇಂದು ಶಾಶ್ವತ ಪರಿಹಾರ ಲಭಿಸಿದೆ. ಇದು ಕೇವಲ ಕಚೇರಿಯ ಪ್ರಕ್ರಿಯೆಯಾಗಿ ಉಳಿಯದೆ, ಆಡಳಿತವು ಪಾರದರ್ಶಕವಾಗಿ ಜನರ ಮನೆಬಾಗಿಲಿಗೆ ತಲುಪಿದ ಒಂದು ಮೈಲಿಗಲ್ಲು. ಈ ಕಾರ್ಯವಿಧಾನವು ಜಿಲ್ಲೆಯಾದ್ಯಂತ ಸೇವಾ ವಿತರಣೆಯಲ್ಲಿ ಹೊಸ ಗುಣಮಟ್ಟವನ್ನು ಸ್ಥಾಪಿಸಿದ್ದು, ಅಂಕಿ-ಅಂಶಗಳಿಗಿಂತಲೂ ಮಿಗಿಲಾದ ಪ್ರಭಾವವನ್ನು ಬೀರಿದೆ:



**22000 ಕ್ಕೂ** **ಹೆಚ್ಚು ಕುಟುಂಬಗಳು** ತಮ್ಮ ನೆಲದ ಮೇಲೆ ಕಾನೂನುಬದ್ಧ ಮಾಲೀಕತ್ವ ಪಡೆದು ಆರ್ಥಿಕ ಮತ್ತು ಸಾಮಾಜಿಕವಾಗಿ ಸಶಕ್ತಗೊಂಡಿವೆ.

**81000 ಕ್ಕೂ** **ಹೆಚ್ಚು ಇ-ಪೌತಿ ವಾರಸು ಮತ್ತು ಪಹಣಿ** ದಾಖಲೆಗಳನ್ನು ತಂತ್ರಜ್ಞಾನದ ಮೂಲಕ ದೋಷಮುಕ್ತಗೊಳಿಸಿ, ಖಾತೆ ಬದಲಾಯಿಸಲಾಗಿದೆ.

**1100 ಕ್ಕೂ** **ಹೆಚ್ಚು** ದಾಖಲೆ ರಹಿತ ಜನವಸತಿ ಪ್ರದೇಶಗಳಿಗೆ ಜಿಲ್ಲಾಡಳಿತವು ನೇರವಾಗಿ ಭೇಟಿ ನೀಡಿ, ಮೂಲಭೂತ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಾಗಿದೆ.





ಪಲಾವಳ್ಳಿ ಗ್ರಾಮ, ಪಾವಗಡ ತಾಲೂಕು

# ತುಮಕೂರು ಜಿಲ್ಲೆ

## ದೃಢತೆ ಮತ್ತು ಪರಿವರ್ತನೆಯ ಕಲ್ಪತರು ನಾಡು

ಕರ್ನಾಟಕದ ಹೆಮ್ಮೆಯ 'ಕಲ್ಪತರು ನಾಡು' ತುಮಕೂರು, ರಾಜ್ಯದ ಅತಿದೊಡ್ಡ ಜಿಲ್ಲೆಗಳಲ್ಲಿ ಒಂದು. ಇತಿಹಾಸ, ಸಂಸ್ಕೃತಿ ಮತ್ತು ಕೃಷಿಯಿಂದ ಸಮೃದ್ಧವಾಗಿರುವ ಈ ಜಿಲ್ಲೆಯ ಪ್ರತಿ ಕಣದಲ್ಲೂ ಜನರ ಪರಿಶ್ರಮವಿದೆ. 10 ತಾಲ್ಲೂಕುಗಳು ಮತ್ತು 2734 ಹಳ್ಳಿಗಳ ವ್ಯಾಪ್ತಿ ಹೊಂದಿರುವ ಈ ಜಿಲ್ಲೆಯ ಬೆನ್ನೆಲುಬೇ ಕೃಷಿ.

ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿರುವ ಇಲ್ಲಿನ ಜನರಲ್ಲಿ ಅದ್ಭುತವಾದ ದೃಢತೆ ಇದೆ. ಈ ಜನರ ದೈನಂದಿನ ಸಂಕಷ್ಟಗಳನ್ನು ಅರಿತ ಜಿಲ್ಲಾಡಳಿತವು, ಜನರ ಬಳಿಗೇ ಹೋಗುವ ಹೊಸ ಆಡಳಿತ ಮಾದರಿಯನ್ನು ಅಳವಡಿಸಿಕೊಂಡಿದೆ. ಕಂದಾಯ ಸಮಾವೇಶದ ಮೂಲಕ ಇಂದು ತುಮಕೂರು ಜಿಲ್ಲೆಯು ಸೇವಾ ವಿತರಣೆಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುತ್ತಿದ್ದು, ಪ್ರಗತಿಯತ್ತ ದಾಪುಗಾಲು ಹಾಕುತ್ತಿದೆ.





ತಾಲಿಕಟ್ಟೆ ಗ್ರಾಮ, ಚಿಕ್ಕನಾಯಕನಹಳ್ಳಿ ತಾಲೂಕು



# ಪಾವಗಡ

ಕರ್ನಾಟಕದ ಗಡಿಯಂಚಿನಲ್ಲಿರುವ ಪಾವಗಡ, ತೀವ್ರ ಬರಗಾಲ ಮತ್ತು ಕಠಿಣ ಭೌಗೋಳಿಕ ಪರಿಸ್ಥಿತಿಗಳ ನಡುವೆಯೂ ಏಷ್ಯಾದ ಅತಿದೊಡ್ಡ ಸೌರಶಕ್ತಿ ಪಾರ್ಕ್ ಮೂಲಕ ಹೊಸ ಬೆಳಕು ಕಂಡಿರುವ ಭರವಸೆಯ ತಾಲೂಕು. ಕೃಷಿಯನ್ನೇ ನೆಚ್ಚಿಕೊಂಡಿರುವ ಇಲ್ಲಿನ ಜನತೆಗೆ 'ಕಂದಾಯ ಸಮಾವೇಶ'ವು ದಶಕಗಳ ಭೂ-ಸಮಸ್ಯೆಗಳಿಂದ ಮುಕ್ತಿ ನೀಡಿ, ಅವರ ಬದುಕಿನಲ್ಲಿ ಅಧಿಕೃತ ಮಾಲೀಕತ್ವದ ಹೊಸ ಶಕ್ತಿಯನ್ನು ತುಂಬಿದೆ.



# ಪ್ರಗತಿಯ ಮೈಲಿಗಲ್ಲುಗಳು

**5028 ಕ್ಕೂ** ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**2049** ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**435** ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**3123 ಕ್ಕೂ** ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.









## ರವಿ ವೈ. ಕೆ.ಎ.ಎಸ್

### ತಹಶೀಲ್ದಾರ್

ದಶಕಗಳ ಪೌತಿ ಖಾತೆ ಮತ್ತು ಪೋಡಿ ಸಮಸ್ಯೆಗಳನ್ನು ಬಗೆಹರಿಸಿ ರೈತರ ಭೂ-ವಿವಾದಗಳಿಗೆ ಶಾಶ್ವತ ಮುಕ್ತಿ ನೀಡುವುದು. ಜೊತೆಗೆ, ಹಕ್ಕುಪತ್ರ, ಇ-ಸ್ವತ್ತು ಹಾಗೂ ಮನೆಬಾಗಿಲಿಗೆ ಪಿಂಚಣಿ ಒದಗಿಸುವ ಮೂಲಕ ಪ್ರತಿಯೊಂದು ಕುಟುಂಬಕ್ಕೂ ಸಾಮಾಜಿಕ ಭದ್ರತೆ ಮತ್ತು ಅಧಿಕೃತ ಮಾಲೀಕತ್ವದ ಬಲ ತುಂಬುವುದೇ ಈ ಅಭಿಯಾನದ ಗುರಿ.

## ಕೈಗೊಂಡ ಕ್ರಮಗಳು

### ಗ್ರಾಮ ಮಟ್ಟದ ಆಂದೋಲನಗಳು

ಅಧಿಕಾರಿಗಳು ಕಚೇರಿಯಿಂದ ಹೊರಬಂದು, ನೇರವಾಗಿ ಹಳ್ಳಿಗಳಲ್ಲೇ ಕಂದಾಯ ಅದಾಲತ್, ದರ್ಖಾಸ್ತು ಪೋಡಿ ಮತ್ತು ಪೋಡಿ ದುರಸ್ತಿ ಶಿಬಿರಗಳನ್ನು ಆಯೋಜಿಸಿದರು.

### ತಂತ್ರಜ್ಞಾನದ ಬಳಕೆ

ಅತ್ಯಾಧುನಿಕ ಡ್ರೋನ್ ತಂತ್ರಜ್ಞಾನ ಹಾಗೂ ದಿಶಾಂಕ್ ಆ್ಯ
ಪ್ ಮೂಲಕ ನಿಖರವಾದ ಭೂ-ಮಾಪನ ಮತ್ತು ಗಡಿ ಗುರುತಿಸುವಿಕೆ.

### ಮನೆಬಾಗಿಲಿಗೆ ಆಡಳಿತ

ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಮತ್ತು ವಿಕಲಚೇತನರಿಗೆ ಮನೆಬಾಗಿಲಿಗೆ 'ಪಿಂಚಣಿ' ಸೌಲಭ್ಯ ಒದಗಿಸುವ ಕಾರ್ಯ.



ಪಾವಗಡ ಪಟ್ಟಣ

# ಫಲಾನುಭವಿಗಳ ಮನದಾಳದ ಮಾತು

ಕಾನೂನಿನ ಮೂಲಕ ಹಕ್ಕು ಸರ್ಕಾರದ ದ್ವಾರ ಬಲ, ನಮ್ಮ ಬದುಕಿಗೆ ಹೊಸ ಭರವಸೆ.

ಪ್ರತಿ ಹಕ್ಕು ಪತ್ರ ಒಂದು ದಾಖಲೆ ಮಾತ್ರವಲ್ಲ, ಅದು ತಲೆಮಾರುಗಳ ಕನಸು, ಭವಿಷ್ಯಕ್ಕೆ ಭದ್ರವಾದ ಆಸ್ತಿ



## ಕಷ್ಟದ ದಿನಗಳಿಗೆ ಸಿಕ್ಕ ಮುಕ್ತಿ

“ನಾವು ದಶಕಗಳಿಂದ ಕಂದಾಯ ಕಟ್ಟುತ್ತಿದ್ದರೂ ನಮಗೆ ಹಕ್ಕುಪತ್ರ ಸಿಕ್ಕಿರಲಿಲ್ಲ. ರಸ್ತೆ, ಕುಡಿಯುವ ನೀರು ಮತ್ತು ವಿದ್ಯುತ್ ಇಲ್ಲದೆ ಸೀಮೆ ಎಣ್ಣೆ ದೀಪಗಳಲ್ಲೇ ಜೀವನ ಸವೆಸಿದ್ದೇವೆ. ಈಗ ಸರ್ಕಾರವೇ ನಮ್ಮ ಮನೆ ಬಾಗಿಲಿಗೆ ಬಂದು ಹಕ್ಕುಪತ್ರ ನೀಡುತ್ತಿದೆ. ಈ ಹಕ್ಕುಪತ್ರ ಸಿಕ್ಕಿರುವುದರಿಂದ ನಮಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಹೊಸ ದಾರಿ ತೆರೆದಂತಾಗಿದೆ.”

- **ಸ್ಥಳೀಯ ನಿವಾಸಿ**



## ಅಸ್ಮಿತೆ ನೀಡಿದ ಹಕ್ಕುಪತ್ರ

“ನಮ್ಮ ಊರು ಕಟ್ಟಿ ಸುಮಾರು ೮೦ ವರ್ಷಗಳೇ ಕಳೆದಿವೆ. ಈ ಮೊದಲು ನಮ್ಮ ಊರು ಎಲ್ಲಿದೆ ಎಂದು ಕೇಳುವವರೇ ಇರಲಿಲ್ಲ. ಆದರೆ ಇಂದು ನಮ್ಮ ತಹಶೀಲ್ದಾರರು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳೇ ಖುದ್ದಾಗಿ ನಮ್ಮ ಊರಿಗೆ ಬಂದು, ನಮ್ಮ ಮನೆಗಳಿಗೆ ನಮ್ಮ ಹೆಸರಿನಲ್ಲೇ ಖಾತೆ ಮಾಡಿಕೊಟ್ಟಿದ್ದಾರೆ. ನಮ್ಮ ಸ್ವಂತ ಮನೆಯ ಮೇಲೆ ನಮಗೆ ಅಧಿಕೃತ ಹಕ್ಕು ಸಿಕ್ಕಿರುವುದು ಹಬ್ಬದಂತಿದೆ.”

- **ಸ್ಥಳೀಯ ನಿವಾಸಿ**

## ತಲೆಮಾರಿನ ಸಮಸ್ಯೆಗೆ ಸುಲಭ ಪರಿಹಾರ

“ಸುಮಾರು 40 ವರ್ಷಗಳಿಂದ ನಮ್ಮ ತಂದೆಯ ಹೆಸರಿನಲ್ಲಿದ್ದ ಪಹಣಿ ಬದಲಾವಣೆಯಾಗದೆ ಉಳಿದಿತ್ತು. ಈಗ ಅಧಿಕಾರಿಗಳೇ ನಮ್ಮ ಊರಿಗೆ ಬಂದು ಆ ಪಹಣಿಯನ್ನು ವಾರಸುದಾರರಾದ ನಮ್ಮ ಹೆಸರಿಗೆ ಬದಲಾಯಿಸಿಕೊಟ್ಟಿದ್ದಾರೆ. ಇದರಿಂದ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ನಮಗೆ ಹೆಚ್ಚಿನ ಅನುಕೂಲವಾಗಿದೆ. ಯಾವುದೇ ಅಲೆದಾಟವಿಲ್ಲದೆ ನಮ್ಮ ಹಕ್ಕು ನಮಗೆ ಸಿಕ್ಕಿರುವುದು ನಿಜಕ್ಕೂ ಸ್ವಾಗತಾರ್ಹ.”

- **ಸ್ಥಳೀಯ ನಿವಾಸಿ**





ಉಪ್ಪಾರಹಳ್ಳಿ ಗ್ರಾಮ, ಪಾವಗಡ ತಾಲೂಕು








ಕರ್ನಾಟಕ ಸರ್ಕಾರ
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ
ಖಾತರಿ ಯೋಜನೆ




ಕರ್ನಾಟಕ ಸರ್ಕಾರ
ತಹಶೀಲ್ದಾರ್ ತಾಲ್ಲೂಕು ದಂಡಾಧಿಕಾರಿ ರವರ ಕಾರ್ಯಾಲಯ
ತುಮಕೂರು ಜಿಲ್ಲೆ.
ಪಾವಗಡ ತಾಲ್ಲೂಕು.








ಮಂಜೂರಾತಿ ಪ್ರಮಾಣಪತ್ರ




ಬಳ್ಳಾರಿ
Bellary
133 KM
ಚಳ್ಳಕೆರೆ
Challakere
85 KM
ಪಾವಗಡ
Pavagada
4 KM
Motor Cyclists.
Follow Lane Discipline.









# ಮಧುಗಿರಿ

ಏಷ್ಯಾದ ಎರಡನೇ ಅತಿದೊಡ್ಡ ಏಕಶಿಲಾ ಬೆಟ್ಟ ಮತ್ತು ಐತಿಹಾಸಿಕ ಕೋಟೆಯನ್ನು ಹೊಂದಿರುವ ಮಧುಗಿರಿ, ತನ್ನ ಕೃಷಿ ಮತ್ತು ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿದೆ. ದುರ್ಗಮ ಬೆಟ್ಟ-ಗುಡ್ಡಗಳು ಮತ್ತು ವಿಸ್ತಾರವಾದ ಗ್ರಾಮೀಣ ಪ್ರದೇಶಗಳನ್ನು ಹೊಂದಿರುವ ಈ ತಾಲೂಕಿನಲ್ಲಿ, 'ಕಂದಾಯ ಸಮಾವೇಶ'ವು ದಶಕಗಳ ಭೂ-ದಾಖಲೆಗಳ ಗೊಂದಲವನ್ನು ನಿವಾರಿಸಿ, ಜನಸಾಮಾನ್ಯರ ಬದುಕಿನಲ್ಲಿ ಹೊಸ ಆಶಾಭಾವನೆಯನ್ನು ಮತ್ತು ಆರ್ಥಿಕ ಭದ್ರತೆಯನ್ನು ಮೂಡಿಸಿದೆ.



# ಪ್ರಗತಿಯ ಮೈಲಿಗಲ್ಲುಗಳು

**9563 ಕ್ಕೂ**
ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**2307**
ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**273**
ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**3814 ಕ್ಕೂ**
ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.



ಶ್ಯಾಂತಮ್ಮ, ತಿಪ್ಪಾಪುರ ತಾಂಡಾ



ಇಂದ್ರಾದೇವಿ ನಾಯಕ್



ತಿಪ್ಪಾಪುರ ತಾಂಡಾ



# ಶ್ರೀನಿವಾಸ್ ಕೆ.ಎ.ಎಸ್

**ತಹಶೀಲ್ದಾರ್**

ಗುಡ್ಡಗಾಡು ಮತ್ತು ಭೌಗೋಳಿಕವಾಗಿ ಸವಾಲಾಗಿರುವ ಹಳ್ಳಿಗಳಲ್ಲಿನ ಭೂ-ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸುವುದು. ಪೌತಿ ಖಾತೆ, ಪೋಡಿ ಸಮಸ್ಯೆಗಳಿಗೆ ಮುಕ್ತಿ ನೀಡಿ, ಪ್ರತಿ ರೈತನಿಗೂ 'ಇ-ಸ್ವತ್ತು' ಮತ್ತು 'ಹಕ್ಕುಪತ್ರ'ದ ಮೂಲಕ ಅಧಿಕೃತ ಮಾಲೀಕತ್ವವನ್ನು ಒದಗಿಸುವುದು.

## ಕೈಗೊಂಡ ಕ್ರಮಗಳು

### ಗ್ರಾಮ ಮಟ್ಟದ ಆಂದೋಲನಗಳು

ದರ್ಖಾಸ್ತು ಪೋಡಿ ಮತ್ತು ಪೋಡಿ ದುರಸ್ತಿ ಶಿಬಿರಗಳನ್ನು ಹಳ್ಳಿಗಳಲ್ಲೇ ಆಯೋಜಿಸಿ, ಧೂಳು ಹಿಡಿಯುತ್ತಿದ್ದ ಕಡತಗಳ ತ್ವರಿತ ವಿಲೇವಾರಿ.

### ತಂತ್ರಜ್ಞಾನದ ಬಳಕೆ

ಡ್ರೋನ್ ಸಮೀಕ್ಷೆ ಮತ್ತು ದಿಶಾಂಕ್ ಆ್ಯಪ್ ಬಳಸಿ ಕ್ಲಿಷ್ಟಕರವಾದ ಭೌಗೋಳಿಕ ಪ್ರದೇಶಗಳಲ್ಲೂ ನಿಖರವಾದ ಅಳತೆ ಮತ್ತು ನಕ್ಷೆ ತಯಾರಿಕೆ.

### ಮನೆಬಾಗಿಲಿಗೆ ಆಡಳಿತ

ಕಂದಾಯ ಅಧಿಕಾರಿಗಳು ನೇರವಾಗಿ ಹಳ್ಳಿಗಳಿಗೆ ತೆರಳಿ ಹಕ್ಕುಪತ್ರ ವಿತರಣೆ ಮತ್ತು ವೃದ್ಧರು, ವಿಧವೆಯರಿಗೆ 'ಪಿಂಚಣಿ' ಸೌಲಭ್ಯವನ್ನು ಖಚಿತಪಡಿಸುವ ಕಾರ್ಯ.



ಕಲ್ಲುವೀರನಹಟ್ಟಿ

# ಆಡಳಿತದ ಸ್ಪಂದನೆ

## ಮನೆಬಾಗಿಲಿಗೆ ಕಂದಾಯ ಸೇವೆಗಳು

ತಲೆಮಾರುಗಳಿಂದ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದ ಪ್ರದೇಶಗಳನ್ನು 'ಕಂದಾಯ ಗ್ರಾಮ'ಗಳಾಗಿ ಘೋಷಿಸಿ, ನಿವಾಸಿಗಳಿಗೆ ಜಿಪಿಎಸ್ ತಂತ್ರಜ್ಞಾನ ಆಧಾರಿತ, ಅತ್ಯಂತ ಸುರಕ್ಷಿತ ಡಿಜಿಟಲ್ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ. ಯಾರಿಂದಲೂ ತಿದ್ದುಪಡಿ ಮಾಡಲಾಗದ ಈ ಹಕ್ಕುಪತ್ರಗಳು ಒಂದು ವೇಳೆ ಕಳೆದುಹೋದರೂ, ಸುಲಭವಾಗಿ ಮರುಮುದ್ರಣ ಪಡೆಯುವಂತಹ ಅತ್ಯಾಧುನಿಕ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ರೈತರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಮೊಬೈಲ್ ಆ್ಯಪ್ ಮೂಲಕ ಇ-ಪೌತಿ ಖಾತೆ ಜಾರಿಗೆ ತರಲಾಗಿದ್ದು, ಯಾವುದೇ ವಿವಾದಗಳಿಲ್ಲದಿದ್ದಲ್ಲಿ ಕೇವಲ 15 ದಿನಗಳಲ್ಲಿ ಆಸ್ತಿ ಹಸ್ತಾಂತರ ಪ್ರಕ್ರಿಯೆ ನಡೆಯುತ್ತಿದೆ. ಇದರೊಂದಿಗೆ, ದಶಕಗಳ ಹಿಂದೆ ಮಂಜೂರಾಗಿದ್ದ ದರ್ಖಾಸ್ತು ಜಮೀನುಗಳ ದುರಸ್ತಿ ಕಾರ್ಯವನ್ನು ಸಹ ಶೀಘ್ರವಾಗಿ ಪೂರ್ಣಗೊಳಿಸುವ ಮೂಲಕ ಕೃಷಿಕರ ಬದುಕಿನಲ್ಲಿ ನೆಮ್ಮದಿ ತರಲಾಗಿದೆ.



# ಫಲಾನುಭವಿಗಳ ಮನದಾಳದ ಮಾತು

## ತಂತ್ರಜ್ಞಾನದ ಮೂಲಕ ಹಕ್ಕುಪತ್ರ ವಿತರಣೆ



### ಅಧಿಕೃತ ಮಾನ್ಯತೆಯಿಂದ ಆರ್ಥಿಕ ಭದ್ರತೆ

“ಕಳೆದ 30-40 ವರ್ಷಗಳಿಂದ ನಮ್ಮ ತಾಂಡ್ಯಕ್ಕೆ 'ಕಂದಾಯ ಗ್ರಾಮ' ಎಂಬ ಮಾನ್ಯತೆ ಇರಲಿಲ್ಲ. ಈಗ ಅಧಿಕೃತವಾಗಿ ನಮ್ಮ ಹೆಸರಲ್ಲಿ ಖಾತೆಗಳು ಬಂದಿರುವುದರಿಂದ, ಬ್ಯಾಂಕುಗಳಿಂದ ಸಾಲ ಸೌಲಭ್ಯಗಳನ್ನು ಪಡೆಯಲು ಬಹಳ ಸುಲಭವಾಗುತ್ತದೆ. ”

- **ಬಂಗಾರಪ್ಪ, ಕಲ್ಲುವೀರನಹಟ್ಟಿ**



### ಹೊಸ ಭರವಸೆಯ ಬೆಳಕು

“**ನಮ್ಮ ಭಾಗ್ಯದ ಬಾಗಿಲು ತೆರೆದಿದೆ** ಸುಮಾರು ಮೂರು-ನಾಲ್ಕು ತಲೆಮಾರುಗಳಿಂದ ನಮ್ಮ ತಾಂಡಾಗಳಿಗೆ ಸರ್ಕಾರದ ಸೌಲಭ್ಯಗಳು ಸಿಗುತ್ತಿರಲಿಲ್ಲ. ಯಾರಿಗೂ ಈ ಜಮೀನು ನಮ್ಮದೇ ಎಂಬ ಅರಿವಿರಲಿಲ್ಲ. ಈಗ ನಮಗೆ ಹಕ್ಕುಪತ್ರಗಳು ಸಿಕ್ಕಿರುವುದರಿಂದ ‘ಇದು ನಮ್ಮ ಮನೆ, ನಮ್ಮ ಜಮೀನು’ ಎಂಬ ಭಾವನೆ ಬಂದಿದೆ. ಅಧಿಕಾರಿಗಳು ಮನೆ ಮನೆಗೆ ಬಂದು ಸರ್ವೆ ಮಾಡಿ ಹಕ್ಕುಪತ್ರಗಳನ್ನು. ”

- **ಶ್ರೀಮತಿ ಇಂದ್ರಾದೇವಿ ನಾಯಕ್, ತಿಪ್ಪಾಪುರ ತಾಂಡಾ**

### 35 ವರ್ಷಗಳ ಕಾಯುವಿಕೆಗೆ ಅಂತ್ಯ

“ನಾವು ಇಲ್ಲಿ 35 ವರ್ಷಗಳಿಂದ ಉಳುಮೆ ಮಾಡ್ತಾ ಇದ್ವಿ. ಇವತ್ತಿನ ದಿವಸ ಅಧಿಕಾರಿಗಳ ಅನುಕೂಲದಿಂದ ನಮಗೆ ಪೋಡಿ ದುರಸ್ತಿ ಮಾಡಿಕೊಟ್ಟಿದ್ದಾರೆ, ತುಂಬಾ ಅನುಕೂಲವಾಗಿದೆ. ”

- **ಚಿಕ್ಕಣ್ಣ, ಕಲ್ಲುವೀರನಹಟ್ಟಿ**







### ಉಚಿತ ಹಕ್ಕುಪತ್ರ ವಿತರಣೆ

“ಸರ್ಕಾರವು ನಮಗೆ ಉಚಿತವಾಗಿ ನೀಡುತ್ತಿರುವ ಕಂದಾಯ ಇಲಾಖೆಯ ಮಂಜೂರಾತಿ ಪ್ರಮಾಣಪತ್ರ ಹಾಗೂ ಮನೆ ಹಕ್ಕುಪತ್ರಗಳನ್ನು ಪಡೆದಿದ್ದೇವೆ. ಇದು ನಮ್ಮ ಮಕ್ಕಳ ಶಿಕ್ಷಣಕ್ಕೂ ಸಹಾಯವಾಗುತ್ತದೆ.”

- **ಜ್ಯೋತಿ ಕೆ.ಟಿ., ಕಲುವೀರನಹಟ್ಟಿ**



### ಮಕ್ಕಳ ಭವಿಷ್ಯಕ್ಕೆ ಆಧಾರ

“ನಮ್ಮ ತಾಂಡಾದಲ್ಲಿ ಈ-ಸ್ವತ್ತು ಮಾಡಿಕೊಟ್ಟು, ಪ್ರತಿಯೊಬ್ಬರಿಗೂ ಅವರ ಮನೆ ಅವರದೇ ಎಂಬ ಹಕ್ಕು ಸ್ಪಷ್ಟವಾಗುವಂತೆ ಮಾಡಿದ್ದಾರೆ. ಇದರಿಂದ ಮಕ್ಕಳ ಶಿಕ್ಷಣಕ್ಕಾಗಿ ಸಾಲ ಪಡೆಯಬಹುದು ಹಾಗೂ ಯಾವುದೇ ಆರ್ಥಿಕ ಕಷ್ಟ ಬಂದರೂ ಸಹಾಯವಾಗುತ್ತದೆ.”

- **ಲಕ್ಷ್ಮಿ, ಕಲುವೀರನಹಟ್ಟಿ**

### ಕುಟುಂಬದ ಆಸ್ತಿ ಹಂಚಿಕೆಗೆ ಸುಗಮ ದಾರಿ

“ನಮ್ಮ ಅಪ್ಪ, ತಾತನ ಕಾಲದಿಂದಲೂ ನಮ್ಮ ಗ್ರಾಮ ಕಂದಾಯ ಗ್ರಾಮವಾಗಿರಲಿಲ್ಲ. ಈಗ ಹಕ್ಕುಪತ್ರಗಳನ್ನು ನೀಡಿ ಈ-ಸ್ವತ್ತು ಮಾಡಿಕೊಟ್ಟಿರುವುದರಿಂದ, ಬ್ಯಾಂಕ್‌ನಲ್ಲಿ ಸಾಲ ಸೌಲಭ್ಯ ಪಡೆಯಲು ಹಾಗೂ ನಮ್ಮ ಅಣ್ಣ-ತಮ್ಮಂದಿರು ಭಾಗವಿಭಾಗ ಮಾಡಿಕೊಳ್ಳಲು ಸಹಾಯವಾಗಿದೆ.”

- **ನರಸಿಂಹಯ್ಯ, ತಿಮ್ಲಾಪುರ ಗ್ರಾಮ**





ಕಲ್ಲುವೀರನಹಟ್ಟಿ ಗ್ರಾಮ, ಮಧುಗಿರಿ ತಾಲೂಕು




ಮಂಜೂರಾತಿ ಪ್ರಮಾಣಪತ್ರ


ಕಂದಾಯ ಇಲಾಖೆ
ಮಂಜೂರಾತಿ ಪ್ರಮಾಣಪತ್ರ
Tehsildar Name: shirin Taj
Signed On: 09-11-2024
BHMHP000127665




ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ
















ಕರ್ನಾಟಕ ಸರ್ಕಾರ
ಜಿ.ಪಂ.ತುಮಕೂರು ತಾ.ಪಂ.ಮಧುಗಿರಿ
ಗ್ರಾ.ಪಂ.ಗರಣಿ ಗ್ರಾಮ-ಕಲ್ಲುಬೀರನಹಳ್ಳಿ
ಫಲಾನುಭವಿ ಹೆಸರು:- ಚಿತ್ರಮ್ಮ ℅ ಕಲ್ಲುಬೀರಪ್ಪ
ಯೋಜನೆ:- ಸ್ವಚ್ಛ ಭಾರತ ಮಿಷನ್ PHASE-2
ಅಂದಾಜು ಮೊತ್ತ:-12,000/-
ಸಾಲು:-2021-22



# ಕೊರಟಗೆರೆ

ಗೊರವನಹಳ್ಳಿ ಮಹಾಲಕ್ಷ್ಮಿ ದೇವಸ್ಥಾನದಂತಹ ಪುಣ್ಯಕ್ಷೇತ್ರಗಳು ಹಾಗೂ ಕೃಷಿ-ಪ್ರಧಾನವಾದ ಹಳ್ಳಿಗಳನ್ನು ಒಳಗೊಂಡಿರುವ ಕೊರಟಗೆರೆ, ತನ್ನದೇ ಆದ ಸಾಂಸ್ಕೃತಿಕ ಮತ್ತು ಭೌಗೋಳಿಕ ವೈಶಿಷ್ಟ್ಯಗಳನ್ನು ಹೊಂದಿದೆ. ಬಂಡೆ-ಗುಡ್ಡಗಳು ಮತ್ತು ಕೃಷಿಭೂಮಿಯ ನಡುವಿನ ಗಡಿ-ಗೊಂದಲಗಳಿಂದಾಗಿ ಇಲ್ಲಿನ ರೈತರು ದಶಕಗಳಿಂದ ಭೂ-ದಾಖಲೆಗಳ ಸಮಸ್ಯೆ ಎದುರಿಸುತ್ತಿದ್ದರು. ಆದರೆ ‘ಕಂದಾಯ ಸಮಾವೇಶ’ವು ಈ ಗೊಂದಲಗಳಿಗೆ ತೆರೆ ಎಳೆದು, ರೈತರ ಬದುಕಿನಲ್ಲಿ ಅಧಿಕೃತತೆಯ ಹೊಸ ಅಧ್ಯಾಯವನ್ನು ಬರೆದಿದೆ.



# ಪ್ರಗತಿಯ ಮೈಲಿಗಲ್ಲುಗಳು

**8018** ಕ್ಕೂ

ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**1770**

ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**254**

ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**3239**ಕ್ಕೂ

ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.









## ಮಂಜುನಾಥ್ ಕೆ. ಕೆ.ಎ.ಎಸ್

**ತಹಶೀಲ್ದಾರ್**

ಗುಡ್ಡಗಾಡು ಮತ್ತು ಕೃಷಿಭೂಮಿಯ ನಡುವಿನ ಅಸ್ಪಷ್ಟ ಗಡಿಗಳನ್ನು ನಿವಾರಿಸುವುದು. ವರ್ಷಗಟ್ಟಲೆ ನೆನೆಗುದಿಗೆ ಬಿದ್ದಿದ್ದ ಪೌತಿ ಖಾತೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ, ಪ್ರತಿಯೊಬ್ಬ ನೈಜ ವಾರಸುದಾರನಿಗೂ ನ್ಯಾಯ ಒದಗಿಸುವುದು.

## ಕೈಗೊಂಡ ಕ್ರಮಗಳು

### ಪೋಡಿ ದುರಸ್ತಿ ಆಂದೋಲನ

'ದರಖಾಸ್ತು' ಪೋಡಿ ಮತ್ತು 'ಪೋಡಿ ದುರಸ್ತಿ' ಶಿಬಿರಗಳನ್ನು ವ್ಯವಸ್ಥಿತವಾಗಿ ಆಯೋಜಿಸಿ, ದಶಕಗಳ ಗಡಿ-ಗೊಂದಲಗಳಿಗೆ ವೈಜ್ಞಾನಿಕವಾಗಿ ಮುಕ್ತಿ ನೀಡಲಾಯಿತು.

### ತಂತ್ರಜ್ಞಾನದ ಹೆಜ್ಜೆಗುರುತು

ಗಡಿ ಗುರುತಿಸುವಿಕೆಯಲ್ಲಿನ ಮಾನವ ದೋಷಗಳನ್ನು ತಪ್ಪಿಸಲು ದಿಶಾಂಕ್ ಆ್ಯಪ್ ಮತ್ತು ಜಿ.ಐ.ಎಸ್ ಮ್ಯಾಪಿಂಗ್‌ನ ಸಮರ್ಪಕ ಬಳಕೆ.

### ಮನೆಬಾಗಿಲಿಗೆ ಸಾಮಾಜಿಕ ಭದ್ರತೆ

ಕೇವಲ ಭೂ-ದಾಖಲೆಗಳಲ್ಲದೆ, ಅರ್ಹ ವೃದ್ಧರು ಹಾಗೂ ಒಂಟಿ ಮಹಿಳೆಯರಿಗೆ 'ಪಿಂಚಣಿ' ಸೌಲಭ್ಯವನ್ನು ಅವರ ಮನೆಬಾಗಿಲಿಗೆ ತಲುಪಿಸುವ ಮಾನವೀಯ ಹೆಜ್ಜೆ.



ಬೈಚಾಪುರ ಗ್ರಾಮ, ಹೋಳವನಹಳ್ಳಿ

# ಆಡಳಿತದ ಸ್ಪಂದನೆ

## ಪೋಡಿ ಮುಕ್ತ ಆಂದೋಲನ ಮತ್ತು ಜಂಟಿ ಖಾತೆಗಳ ವಿಂಗಡಣೆ

ಕೊರಟಗೆರೆ ತಾಲೂಕಿನ ಹೊಳವನಹಳ್ಳಿ ಹೋಬಳಿಯ ಅರಸಾಪುರ ಗ್ರಾಮದಲ್ಲಿ ದಶಕಗಳಿಂದಲೂ ಜಂಟಿ ಖಾತೆಗಳ ಸಮಸ್ಯೆ ಇತ್ತು. ಒಟ್ಟು 49ಕ್ಕೂ ಹೆಚ್ಚು ಸರ್ವೇ ನಂಬರ್‌ಗಳು ಜಂಟಿ ಖಾತೆಯಲ್ಲಿದ್ದುದರಿಂದ ರೈತರು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದರು. ಇದನ್ನು ಮನಗಂಡ ಕಂದಾಯ ಮತ್ತು ಮೋಜಣಿ ಇಲಾಖೆಗಳು ಜಂಟಿಯಾಗಿ ರೈತರ ಮನೆಬಾಗಿಲಿಗೆ ತೆರಳಿ, ಕುಟುಂಬಗಳ ವಿಭಾಗ ಪಟ್ಟಿ ಆಧರಿಸಿ 'ಹಿಸ್ಸಾ' ಪ್ರಕ್ರಿಯೆಯನ್ನು ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಿವೆ.

ಈ ಪ್ರಕ್ರಿಯೆಯ ಭಾಗವಾಗಿ ಇಲಾಖೆಯು ಪಕ್ಕಾ ಟಿಪ್ಪಣಿ ಮತ್ತು ಆಕಾರಬಂದ್ ಸಿದ್ಧಪಡಿಸಿದ್ದು, ಪ್ರತಿಯೊಬ್ಬ ರೈತರಿಗೂ ಅವರ ಜಮೀನಿಗೆ ಸಂಬಂಧಿಸಿದ ಪ್ರತ್ಯೇಕ ನಕ್ಷೆ ಹಾಗೂ ಹೊಸ ಆರ್.ಟಿ.ಸಿ ಸೃಜನೆ ಮಾಡಿಕೊಟ್ಟಿದೆ. ಈ ವೈಜ್ಞಾನಿಕ ಗಡಿ ನಿರ್ಣಯದಿಂದಾಗಿ ಈವರೆಗೆ ಅಣ್ಣ-ತಮ್ಮಂದಿರ ನಡುವೆ ಇದ್ದ ಜಮೀನು ವ್ಯಾಜ್ಯಗಳು ಶಾಶ್ವತವಾಗಿ ಅಂತ್ಯಗೊಂಡಿವೆ. ಅಲ್ಲದೆ, ಪ್ರತ್ಯೇಕ ಖಾತೆಗಳಿಂದಾಗಿ ಈಗ ಬ್ಯಾಂಕ್ ಸಾಲ ಪಡೆಯುವುದು, ಜಮೀನು ಮಾರಾಟ ಹಾಗೂ ಭೂ ಪರಿವರ್ತನೆಯಂತಹ ಕೆಲಸಗಳು ಯಾವುದೇ ಅಡೆತಡೆಯಿಲ್ಲದೆ ಸರಾಗವಾಗಿ ನಡೆಯುತ್ತಿವೆ.







# ಫಲಾನುಭವಿಗಳ ಮನದಾಳದ ಮಾತು

## ತಂತ್ರಜ್ಞಾನದ ಮೂಲಕ ಹಕ್ಕುಪತ್ರ ವಿತರಣೆ



### ಅಲೆದಾಟ ತಪ್ಪಿಸಿದ ಮನೆಬಾಗಿಲಿನ ಆಡಳಿತ

“ನಮ್ಮ ಆಸ್ತಿ ನಮ್ಮ ತಂದೆ ಹಾಗೂ ದೊಡ್ಡಪ್ಪನವರ ಹೆಸರಲ್ಲಿದ್ದು, ಖಾತೆ-ಪಾಣಿ ಬದಲಾವಣೆಯಾಗಿರಲಿಲ್ಲ. ಮೊದಲು ತಾಲೂಕು ಕಚೇರಿಗಳಿಗೆ ದಿನವೂ ಅಲೆದಾಡಬೇಕಾಗಿತ್ತು. ಆದರೆ ಈಗ ಕಂದಾಯ ಅಧಿಕಾರಿಗಳೇ ನಮ್ಮ ಮನೆ ಹತ್ತಿರ ಬಂದು, ಸ್ವಯಂಪ್ರೇರಿತರಾಗಿ ಹಿಂದಿನ 40–50 ವರ್ಷಗಳಿಂದ ಬಾಕಿ ಉಳಿದಿದ್ದ ಪೌತಿ ಖಾತೆಗಳನ್ನು ಕೇವಲ 15 ದಿನಗಳೊಳಗೆ ನಮ್ಮ ಹೆಸರಿಗೆ ಮಾಡಿಕೊಟ್ಟಿದ್ದಾರೆ.”

- **ಶ್ರೀ ಈಶ್ವರಪ್ಪ, ಒಳವನಹಳ್ಳಿ ಗ್ರಾಮ**



### ಉಚಿತ ಸೇವೆ, ವ್ಯಾಜ್ಯಮುಕ್ತ ಬದುಕು

“ನಾವು ಮೂವರು ಅಣ್ಣ-ತಮ್ಮಂದಿರು ಜಂಟಿ ಖಾತೆ ಹೊಂದಿದ್ದೆವು. ಅಧಿಕಾರಿಗಳು ಸ್ವತಃ ಬಂದು, ನಮ್ಮಿಂದ ಒಂದು ರೂಪಾಯಿಯೂ ಪಡೆಯದೆ, ಉಚಿತವಾಗಿ ಸರ್ವೆ ನಡೆಸಿ ಜಮೀನಿನ ನಾಲ್ಕು ಮೂಲೆಗಳಿಗೆ ಕಲ್ಲು ಹಾಕಿ ಗಡಿ ನಿಗದಿಪಡಿಸಿದ್ದಾರೆ. ಈಗ ನಮಗೆ ಪ್ರತ್ಯೇಕ ಖಾತೆ ಹಾಗೂ ಪಾಣಿ ಒದಗಿಸಿದ್ದು, ಇನ್ನು ಮುಂದೆ ಯಾವುದೇ ತಂಟೆ-ತಕರಾರುಗಳಿಲ್ಲದೆ ಶಾಂತಿಯುತವಾಗಿ ಇರಬಹುದು.”

- **ಶ್ರೀ ಕೆಂಚಪ್ಪ, ಹೆಮ್ಮನಹಳ್ಳಿ ಗ್ರಾಮ**

### 60-70 ವರ್ಷಗಳ ಕಾಯುವಿಕೆಗೆ ಅಂತ್ಯ

“ನಮ್ಮ ತಾತ-ಮುತ್ತಾತರ ಕಾಲದಿಂದಲೂ ಸುಮಾರು 60–70 ವರ್ಷಗಳಿಂದ ಪೌತಿ ಖಾತೆ ಮಾಡಿಸಿಕೊಳ್ಳಬೇಕೆಂಬ ಕನಸಿತ್ತು, ಆದರೆ ಅಲೆದಾಡಲು ಸಾಧ್ಯವಾಗದೆ ಹಾಗೆಯೇ ಬಿಟ್ಟಿದ್ದೆವು. ಮಾನ್ಯ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರ ಈ ಅಭಿಯಾನದಿಂದ, ತಹಶೀಲ್ದಾರ್ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಮನೆಮನೆಗೆ ಬಂದು ದಾಖಲೆಗಳನ್ನು ಪರಿಶೀಲಿಸಿ ನಮ್ಮ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಇದರಿಂದ ನಮಗೆ ತುಂಬಾ ಸಂತೋಷವಾಗಿದೆ.”

- **ಶ್ರೀಮತಿ ಗಿರಿಯಮ್ಮ, ಚಿಕ್ಕನಹಳ್ಳಿ**





ಚಿಂಪೂಗಾನಹಳ್ಳಿ ಗ್ರಾಮ, ಕೊರಟಗೆರೆ ತಾಲೂಕು








ಮಂಜೂರಾತಿ ಪ್ರಮಾಣಪತ್ರ







# ಶಿರಾ

ಐತಿಹಾಸಿಕ ಹಿನ್ನೆಲೆ ಮತ್ತು ಕೃಷಿ ಪ್ರಧಾನವಾದ ಶಿರಾ ತಾಲೂಕು, ತನ್ನ ಜನರ ಬಹುಕಾಲದ ಭೂ-ಸಮಸ್ಯೆಗಳಿಗೆ 'ಕಂದಾಯ ಸಮಾವೇಶ'ದ ಮೂಲಕ ಮುಕ್ತಿ ನೀಡಿದೆ. ಕಂದಾಯ ಇಲಾಖೆಯನ್ನು ರೈತರ ಮನೆ ಬಾಗಿಲಿಗೆ ಕೊಂಡೊಯ್ಯುವ ಮೂಲಕ, ದಶಕಗಳ ಕಾಲದ ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸಿ, ಜನಸಾಮಾನ್ಯರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವಲ್ಲಿ ಶಿರಾ ಮಾದರಿಯಾಗಿದೆ.



# ಪ್ರಗತಿಯ ಮೈಲಿಗಲ್ಲುಗಳು

**10585** ಕ್ಕೂ

ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**1891**

ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**1908**

ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**2918** ಕ್ಕೂ

ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.









## ಆನಂದ್ ಕುಮಾರ್ ಜಿ. ಕೆ.ಎ.ಎಸ್

### ತಹಶೀಲ್ದಾರ್

ಶಿರಾ ತಾಲೂಕಿನ ಕೆರೆಹಳ್ಳಿ ಗ್ರಾಮದ ಸರ್ವೇ ನಂಬರ್ 95ರಲ್ಲಿ, ಬಗರ್ ಹುಕುಂ ಹಾಗೂ ದರಖಾಸ್ತಿನಡಿ ಮಂಜೂರಾಗಿದ್ದ ಜಮೀನುಗಳ ದುರಸ್ತಿ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಸುಮಾರು 59 ಫಲಾನುಭವಿಗಳ ಜಮೀನುಗಳನ್ನು ಅಳತೆ ಮಾಡಿ, ಈಗ ಪ್ರತಿಯೊಬ್ಬರಿಗೂ ಪ್ರತ್ಯೇಕ ಸರ್ವೇ ನಂಬರ್ ನೀಡಲಾಗಿದೆ.

## ಕೈಗೊಂಡ ಕ್ರಮಗಳು

### ಗ್ರಾಮ ಮಟ್ಟದ ಅಭಿಯಾನ

ಅಧಿಕಾರಿಗಳಿಂದ ನೇರವಾಗಿ ಹಳ್ಳಿಗಳಲ್ಲಿಯೇ ಮೊಕ್ಕಾಂ ಹೂಡಿ, ಸ್ಥಳದಲ್ಲಿಯೇ ಅರ್ಜಿ ವಿಲೇವಾರಿ.

### ತಂತ್ರಜ್ಞಾನದ ಬಳಕೆ

ಗಡಿ ವಿವಾದಗಳನ್ನು ಶಾಶ್ವತವಾಗಿ ಪರಿಹರಿಸಲು ಡ್ರೋನ್ ಮತ್ತು ಜಿ.ಐ.ಎಸ್ ಆಧಾರಿತ ನಿಖರ ಭೂ-ಸರ್ವೆ.

### ಮನೆ ಬಾಗಿಲಿಗೆ ಪಿಂಚಣಿ

ಅರ್ಹ ಫಲಾನುಭವಿಗಳನ್ನು ಹುಡುಕಿ, ಅವರ ಮನೆ ಬಾಗಿಲಿಗೆ ತೆರಳಿ ಪಿಂಚಣಿ ಆದೇಶ ಪತ್ರ ವಿತರಣೆ.



ಕೆರೆಹಳ್ಳಿ, ಸಿರಾ ತಾಲೂಕ

# ಆಡಳಿತದ ಸ್ಪಂದನೆ

## 'ಪೋಡಿ' ಮತ್ತು 'ದುರಸ್ತಿ'ಯ ಮೂಲಕ ದಾಖಲೆಗಳ ಸುಧಾರಣೆ

ಶಿರಾ ತಾಲ್ಲೂಕಿನ ಕೆರೆಹಳ್ಳಿ ಗ್ರಾಮದ ಸರ್ವೇ ನಂಬರ್ 95ರಲ್ಲಿ, ಬಗರ್ ಹುಕುಂ ಹಾಗೂ ದರಖಾಸ್ತಿನಡಿ ಮಂಜೂರಾಗಿದ್ದ ಜಮೀನುಗಳ ದುರಸ್ತಿ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಸುಮಾರು 59 ಫಲಾನುಭವಿಗಳ ಜಮೀನುಗಳನ್ನು ಅಳತೆ ಮಾಡಿ, ಈಗ ಪ್ರತಿಯೊಬ್ಬರಿಗೂ ಪ್ರತ್ಯೇಕ ಸರ್ವೇ ನಂಬರ್ ನೀಡಲಾಗಿದೆ. ಈ ಪ್ರಕ್ರಿಯೆಯ ಮೂಲಕ ಕೆರೆಹಳ್ಳಿಯ ಸುಮಾರು 40 ಜನ ರೈತರಿಗೆ ಈಗಾಗಲೇ ಅವರ ಜಮೀನಿನ ಅಧಿಕೃತ ದಾಖಲೆಗಳನ್ನು ಸಿದ್ಧಪಡಿಸಿ ಹಸ್ತಾಂತರಿಸಲಾಗಿದೆ.

ಇದೇ ಮಾದರಿಯಲ್ಲಿ ಮಾಗೋಡು ವೃತ್ತದಲ್ಲೂ ಸಹ ಬೃಹತ್ ಮಟ್ಟದ ಅಭಿಯಾನ ನಡೆಸಲಾಗಿದ್ದು, ಸುಮಾರು 350 ಜನರಿಗೆ ಮಂಜೂರಾಗಿದ್ದ ಜಮೀನುಗಳಿಗೆ ಪೋಡಿ ಮಾಡಲಾಗಿದೆ. ಈ ಎಲ್ಲಾ ಫಲಾನುಭವಿಗಳಿಗೆ ಹೊಸ ಖಾತೆ ಸಂಖ್ಯೆಯೊಂದಿಗೆ ಅವರದ್ದೇ ಆದ ವೈಯಕ್ತಿಕ ಪಹಣಿಗಳನ್ನು ತಯಾರಿಸಿ ವಿತರಿಸಲಾಗಿದೆ. ಈ ಕ್ರಮದಿಂದಾಗಿ ದಶಕಗಳ ಕಾಲ ಜಂಟಿ ಖಾತೆಯಲ್ಲಿದ್ದ ಜಮೀನುಗಳು ಈಗ ರೈತರ ಹೆಸರಿಗೆ ಪ್ರತ್ಯೇಕವಾಗಿ ನೋಂದಣಿಗೊಂಡಂತಾಗಿದೆ.







# ಫಲಾನುಭವಿಗಳ ಮನದಾಳದ ಮಾತು

## ತಂತ್ರಜ್ಞಾನದ ಮೂಲಕ ಹಕ್ಕುಪತ್ರ ವಿತರಣೆ



### ಜಂಟಿ ದಾಖಲೆಯ ಗೊಂದಲಕ್ಕೆ ಅಂತ್ಯ

“ನನಗೆ ನಾಲ್ಕು ಎಕರೆ ಜಮೀನು ಮಂಜೂರಾಗಿದೆ. 59 ಜನರು ಒಟ್ಟಾಗಿ ಪಾಣಿ ತೆಗೆಯಲು ಹೋದಾಗ ಜಂಟಿ ದಾಖಲೆಯಿಂದ ಬಹಳ ಸಮಸ್ಯೆ ಉಂಟಾಗುತ್ತಿತ್ತು. ಇಂದು ಬಹಳ ಒಳ್ಳೆಯ ಕೆಲಸ ಮಾಡಿ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಹಾಗೂ ಮುಂದೆ ನಿಂತು ಕೆಲಸ ಮಾಡಿಕೊಟ್ಟ ಸೆಕ್ರೆಟರಿ ಮೇಡಂ ಹಾಗೂ ಗ್ರಾಮ ಸೇವಕರಿಗೆ ಹೃದಯಪೂರ್ವಕ ಧನ್ಯವಾದಗಳು.”

- **ಶ್ರೀಮತಿ ಕಾಮಾಕ್ಷಿ, ಕೆರೆಹಳ್ಳಿ**



### 32 ಪುಟಗಳ ಜಂಟಿ ಪಹಣಿಯಿಂದ ಮುಕ್ತಿ,

“ಕೆರೆಹಳ್ಳಿ ಗ್ರಾಮದ ಸರ್ವೇ ನಂಬರ್ 95 ರಲ್ಲಿ 213 ಎಕರೆ ಜಮೀನಿತ್ತು. 1998 ರಲ್ಲಿ ಅರ್ಜಿ ಹಾಕಿ 2002 ಮತ್ತು 2005 ರಲ್ಲಿ ಸಾಗುವಳಿ ಚೀಟಿ ಪಡೆದಿದ್ದೆವು. ಆದರೆ ದುರಸ್ತಿಯಾಗದ ಕಾರಣ ಒಬ್ಬರ ಪಹಣಿ ತೆಗೆದರೆ 50 ಜನರ ಹೆಸರುಗಳಿರುವ 32 ಪುಟಗಳ ಪಹಣಿ ಬರುತ್ತಿತ್ತು. ಇದರಿಂದ ಬ್ಯಾಂಕ್ ಸಾಲ ಪಡೆಯಲು ಕಷ್ಟವಾಗುತ್ತಿತ್ತು. ಈಗ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ ಎಲ್ಲವನ್ನೂ ದುರಸ್ತಿ ಮಾಡಿಸಿ, ಪ್ರತಿಯೊಬ್ಬರಿಗೂ ಪ್ರತ್ಯೇಕ ಸರ್ವೇ ನಂಬರ್ ಹಾಗೂ ದಾಖಲಾತಿ ನೀಡಲಾಗಿದೆ.”

- **ಶ್ರೀ ಚಿನ್ನೋಬಣ್ಣ, ಕೆರೆಹಳ್ಳಿ**

### ಒಂದೇ ಪಾಣಿಯಿಂದ ಸ್ವತಂತ್ರ ಖಾತೆಗೆ

“ನಮಗೆ 95ನೇ ಸರ್ವೇ ನಂಬರಲ್ಲಿ 2 ಎಕರೆ 20 ಗುಂಟೆ ಜಮೀನು ಮಂಜೂರಾಗಿದ್ದು, ಮೊದಲು ಇದರೊಳಗೆ 59 ಜನ ಖಾತೆದಾರರು ಇದ್ದರು. ಸುಮಾರು 30-40 ಪುಟಗಳ ಪಾಣಿ ಬರುತ್ತಿತ್ತು. ಈಗ ಕೃಷ್ಣ ಬೈರೇಗೌಡರು ಪೋಡಿ ಮಾಡಿರುವುದರಿಂದ ಪ್ರತ್ಯೇಕ (ಸಿಂಗಲ್) ಪಾಣಿ ಬರುತ್ತಿದ್ದು, ರೈತರಿಗೆ ಬಹಳ ಅನುಕೂಲವಾಗಿದೆ.”

- **ಶ್ರೀ ಕೆ. ನಾಗರಾಜು, ಕೆರೆಹಗಲಹಳ್ಳಿ**



### ಅಲೆದಾಟವಿಲ್ಲದ ಸೇವೆ, ಜನಸಾಮಾನ್ಯರಿಗೆ ನೆಮ್ಮದಿ

“ ಮೊದಲು ಒಂದು ಪಾಣಿಯಲ್ಲಿ ಐದು–ಆರು ಜನ ಇದ್ದೆವು, ಯಾವುದೇ ಅನುಕೂಲ ಪಡೆಯಬೇಕಾದರೂ ಎಲ್ಲರನ್ನೂ ಕೇಳಿ ಸಹಿ ಹಾಕಿಸಿಕೊಳ್ಳಬೇಕಾಗುತ್ತಿತ್ತು ಮತ್ತು ಅವರು ಸಹಕಾರ ನೀಡುತ್ತಿರಲಿಲ್ಲ. ಈಗ ಪ್ರತ್ಯೇಕವಾಗಿ ಪಾಣಿ ನೀಡಿರುವುದರಿಂದ, ನಮ್ಮ ಖಾತೆಗಳು ಪ್ರತ್ಯೇಕವಾಗಿವೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ತೊಂದರೆ ಇಲ್ಲದೆ ಪಡೆಯಲು ಅವಕಾಶ ದೊರಕಿದೆ. ”

- **ಶ್ರೀ ಬಾಲಕೃಷ್ಣಪ್ಪ, ಇನಂಗೊಳ್ಳಹಳ್ಳಿ**





### 150 ವರ್ಷಗಳ ಬಳಿಕ ಕಂದಾಯ ಗ್ರಾಮದ ಮಾನ್ಯತೆ

“ ಮುದಿಗೆರೆ ಕಾವಲ್, ಮುದಿಗೆರೆ ತಾಂಡಾ, ಅಂತಾಪುರ, ಮೇಕೆರೆಹಳ್ಳಿ, ಭೂತಪ್ಪನ ದೇವಸ್ಥಾನ, ಮುದಿಗೆರೆ ಗೊಲ್ಲರಹಟ್ಟಿ ಸೇರಿ ಈಗ ನಮ್ಮ ಗ್ರಾಮ ರೂಪುಗೊಂಡಿದೆ. 100–150 ವರ್ಷಗಳಿಂದಲೂ ನಮಗೆ ‘ನಮ್ಮ ಗ್ರಾಮ’ ಎಂಬ ಗುರುತು ಸ್ಪಷ್ಟವಾಗಿರಲಿಲ್ಲ. ಈಗ ಸಿದ್ದರಾಮಯ್ಯನವರ ಸರ್ಕಾರ ಹಾಗೂ ಮಾಜಿ ಸಚಿವ ಜಯಚಂದ್ರ ಸಾಹೇಬರವರ ಮೂಲಕ ಕಂದಾಯ ಗ್ರಾಮದ ಹಕ್ಕುಪತ್ರಗಳನ್ನು ನೀಡಲಾಗಿದೆ. ಇಂದಿಗೆ ನಮ್ಮ ಊರು ‘ನಮ್ಮದು’ ಎಂಬ ಭಾವನೆ ಮೂಡಿದೆ. ”

- **ಶ್ರೀಮತಿ ಜಯಲಕ್ಷ್ಮಿ, ಮುದಿಗೆರೆ ತಾಂಡಾ**



### ವಿಮಾ ಯೋಜನೆಗಳಿಗೆ ಸುಗಮ ದಾರಿ

“ ಸಾಗುವಳಿಯಲ್ಲಿರುವ ಜಮೀನುಗಳಿಗೆ ದುರಸ್ತಿ ಖಾತೆ ಮತ್ತು ಪೋಡಿ ಖಾತೆಗಳನ್ನು ಮಾಡಿಕೊಟ್ಟಿರುವುದಕ್ಕಾಗಿ ತಹಶೀಲ್ದಾರ್ ಹಾಗೂ ಸೆಕ್ರೆಟರಿ ಅವರಿಗೆ ಸಾರ್ವಜನಿಕರ ಪರವಾಗಿ ಧನ್ಯವಾದಗಳು. ಬೆಳೆ ವಿಮೆ, ಕಿಸಾನ್ ಸಮ್ಮಾನ್ ಯೋಜನೆ ಮೊದಲಾದ ಸೌಲಭ್ಯಗಳನ್ನು ಪಡೆಯಲು ಈ ಕಾರ್ಯಗಳು ಅತ್ಯಂತ ಉಪಯುಕ್ತವಾಗಿವೆ. ”

- **ಸಾರ್ವಜನಿಕರ ಪ್ರತಿನಿಧಿ**

### ಸ್ವಾತಂತ್ರ್ಯ ಸಿಕ್ಕಂತಹ ಸಂಭ್ರಮ

“ ಸುಮಾರು 100–150 ವರ್ಷಗಳಾದರೂ ನಮ್ಮ ಊರು ಮುದುಗೆರೆ ಕಾವಲ್ ರೆವಿನ್ಯೂ ಗ್ರಾಮವಾಗಿರಲಿಲ್ಲ, ನಾವು ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷ್ಣ ಬೈರೇಗೌಡರು ಮತ್ತು ಜಯಚಂದ್ರ ಅವರು ಈ ಸರ್ಕಾರದಲ್ಲೇ ರೆವಿನ್ಯೂ ಗ್ರಾಮ ಮಾಡಿಕೊಡುವುದಾಗಿ ಹೇಳಿ ಕೆಲಸ ನೆರವೇರಿಸಿದರು. ಇಂದು ನಮ್ಮ ಊರು ರೆವಿನ್ಯೂ ಗ್ರಾಮವಾಗಿ ಪರಿವರ್ತನೆಯಾಗಿ, ನಮಗೆ ಸ್ವಾತಂತ್ರ್ಯ ಸಿಕ್ಕಂತಾಗಿದೆ. ”

- **ಶ್ರೀ ಕೆ. ನಾಗರಾಜು, ಕೆರೆಹಗಲಹಳ್ಳಿ**





ಕೆರೆಯಾಗಳಹಳ್ಳಿ ಗ್ರಾಮ, ಸಿರಾ ತಾಲೂಕು












ಶ್ರೀ ಕಂಬದ ರಂಗನಾಥ ಸ್ವಾಮಿ









# ತುಮಕೂರು

ತುಮಕೂರು ಜಿಲ್ಲೆಯ ಆಡಳಿತಾತ್ಮಕ ಕೇಂದ್ರಸ್ಥಾನವಾಗಿರುವ ತುಮಕೂರು ತಾಲೂಕು, ವೇಗವಾಗಿ ಬೆಳೆಯುತ್ತಿರುವ ನಗರೀಕರಣ ಮತ್ತು ತನ್ನ ಮೂಲ ಕೃಷಿ ಸಂಸ್ಕೃತಿಯ ಅಪರೂಪದ ಸಂಗಮವಾಗಿದೆ. ಹೆಚ್ಚುತ್ತಿರುವ ಜನಸಂದಣಿ ಮತ್ತು ವಿಸ್ತರಿಸುತ್ತಿರುವ ನಗರದ ಅಂಚಿನಲ್ಲಿರುವ ಹಳ್ಳಿಗಳಲ್ಲಿ ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಭೂ-ದಾಖಲೆಗಳ ಗೊಂದಲಗಳಿಗೆ ’ಕಂದಾಯ ಸಮಾವೇಶ’ವು ತಾರ್ಕಿಕ ಅಂತ್ಯ ಹಾಡಿದೆ. ಆಡಳಿತದ ಕೇಂದ್ರಬಿಂದುವಾಗಿ, ಈ ತಾಲೂಕು ಇಡೀ ಜಿಲ್ಲೆಗೆ ಒಂದು ಮಾದರಿ ವ್ಯವಸ್ಥೆಯನ್ನು ರೂಪಿಸಿಕೊಟ್ಟಿದೆ.



# ಪ್ರಗತಿಯ ಮೈಲಿಗಲ್ಲುಗಳು

**5641 ಕ್ಕೂ**

ಹೆಚ್ಚು ಇ-ಪೌತಿ
ಪ್ರಕರಣಗಳಿಗೆ ಖಾತೆ
ಬದಲಾಯಿಸಲಾಗಿದೆ.

**1368**

ಕಂದಾಯ ಗ್ರಾಮದ
ಹಕ್ಕುಪತ್ರಗಳಿಗೆ ಇ-ಸ್ವತ್ತು
ಖಾತೆ ಸೃಜಿಸಲಾಗಿದೆ.

**50**

ಪ್ರಕರಣಗಳಿಗೆ ಹೊಸ
ಪಹಣಿ ಸೃಜಿಸಲಾಗಿದೆ.

**4516 ಕ್ಕೂ**

ಇಳಿ ವಯಸ್ಸಿನ
ವಯೋವೃದ್ಧರು, ವಿಧವೆಯರಿಗೆ
ಮಾಸಿಕ ಪಿಂಚಣಿ ಮಂಜೂರು
ಮಾಡಲಾಗಿದೆ.









## ರಾಜೇಶ್ವರಿ ಪಿ. ಎಸ್. ಕೆ.ಎ.ಎಸ್

**ತಹಶೀಲ್ದಾರ್**

ಜನದಟ್ಟಣೆಯಿರುವ ಹೋಬಳಿಗಳಲ್ಲಿನ ಕಂದಾಯ ಇಲಾಖೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು. ಪ್ರತಿಯೊಂದು ಕುಟುಂಬಕ್ಕೂ, ವಿಶೇಷವಾಗಿ ನಗರದ ಅಂಚಿನಲ್ಲಿರುವ ಬಡ ಹಾಗೂ ತಳಮಟ್ಟದ ಜನತೆಗೆ, ನಿಖರವಾದ ಇ-ಸ್ವತ್ತು ಮತ್ತು ಹಕ್ಕುಪತ್ರಗಳನ್ನು ಒದಗಿಸಿ, ಅವರ ಆಸ್ತಿಗಳಿಗೆ ಕಾನೂನುಬದ್ಧ ಭದ್ರತೆ ನೀಡುವುದು.

## ಕೈಗೊಂಡ ಕ್ರಮಗಳು

### ಜನಸಂಪರ್ಕ ಮತ್ತು ತಂತ್ರಜ್ಞಾನದ ವೇಗ

ಕಂದಾಯ ಅದಾಲತ್‌ಗಳ ಮೂಲಕ ವಾರ್ಡ್ ಮತ್ತು ಗ್ರಾಮ ಮಟ್ಟದಲ್ಲಿ ಅಧಿಕಾರಿಗಳೇ ಖುದ್ದಾಗಿ ಅರ್ಜಿಗಳನ್ನು ಸ್ವೀಕರಿಸಿದರು. ಡ್ರೋನ್ ಸಮೀಕ್ಷೆ ಮತ್ತು ದಿಶಾಂಕ್ ಆ್ಯಪ್ ಬಳಸಿ ಭೂ-ಮಾಪನವನ್ನು ಡಿಜಿಟಲೀಕರಣ ಗೊಳಿಸಲಾಯಿತು.

### ತ್ವರಿತ ವಿಲೇವಾರಿ ಪಡೆ

ಆರ್.ಐ ಮತ್ತು ವಿ.ಎ ಗಳ ವಿಶೇಷ ತಂಡಗಳನ್ನು ರಚಿಸಿ ದರಖಾಸ್ತು ಪೋಡಿ, ಪೋಡಿ ದುರಸ್ತಿ ಮತ್ತು ಮನೆಬಾಗಿಲಿಗೆ 'ಪಿಂಚಣಿ' ತಲುಪಿಸುವ ಕಾರ್ಯವನ್ನು ಸಮರೋಪಾದಿಯಲ್ಲಿ ಮಾಡಲಾಯಿತು.



ಕದರನಹಳ್ಳಿ ತಾಂಡ, ತುಮಕೂರು ತಾಲೂಕ

# ಆಡಳಿತದ ಸ್ಪಂದನೆ

## ಭವಿಷ್ಯದ ಅಭಿವೃದ್ಧಿಗೆ ಭದ್ರ ಬುನಾದಿ

ಮಾನ್ಯ ಕಂದಾಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ, ಕಳೆದ ಒಂದು ವರ್ಷದಿಂದ ತಾಲೂಕು ಆಡಳಿತವು ಕಂದಾಯ ಗ್ರಾಮಗಳ ರಚನೆಯಲ್ಲಿ ಅತ್ಯಂತ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಈ ನಿರಂತರ ಶ್ರಮದ ಫಲವಾಗಿ, ಕಳೆದ ಕೇವಲ ಒಂದು ವರ್ಷದಲ್ಲಿಯೇ 180ಕ್ಕೂ ಹೆಚ್ಚು ಹೊಸ ಕಂದಾಯ ಗ್ರಾಮಗಳನ್ನು ಗುರುತಿಸಲಾಗಿದೆ. ಅಷ್ಟೇ ಅಲ್ಲದೆ, ಈಗಾಗಲೇ ಸುಮಾರು 1,250 ಗ್ರಾಮಗಳಲ್ಲಿ ಹಕ್ಕುಪತ್ರಗಳ ನೋಂದಣಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ.

ಈ ಯೋಜನೆಯು ಕೇವಲ ದಾಖಲೆಗಳ ಸೃಷ್ಟಿಯಲ್ಲ, ಬದಲಾಗಿ ಜನರ ಜೀವನಮಟ್ಟ ಸುಧಾರಿಸುವ ಪ್ರಮುಖ ಹೆಜ್ಜೆಯಾಗಿದೆ. ಕಂದಾಯ ಗ್ರಾಮಗಳ ರಚನೆಯಿಂದಾಗಿ ಜನರಿಗೆ ಸರ್ಕಾರದಿಂದ ಸಿಗಬೇಕಾದ ಮೂಲಭೂತ ಸೌಲಭ್ಯಗಳು ನೇರವಾಗಿ ದೊರೆಯಲಿವೆ. ಅಲ್ಲದೆ, ಭವಿಷ್ಯದಲ್ಲಿ ಸರ್ಕಾರವು ಹೊಸ ಪಾಲಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲು ಇದು ಅತ್ಯಂತ ಅನುಕೂಲಕರವಾದ ಅಡಿಪಾಯವಾಗಲಿದೆ.

ಸರ್ಕಾರಿ ಸೇವೆಯ ನಿಜವಾದ ಸಾರ್ಥಕತೆಯು ಜನರ ಮುಖದಲ್ಲಿನ ಮಂದಹಾಸದಲ್ಲಿ ಅಡಗಿರುತ್ತದೆ. ಹಕ್ಕುಪತ್ರ ವಿತರಣೆಯ ಸಂದರ್ಭದಲ್ಲಿ, ಮಾತನಾಡಲು ಶಕ್ತಿಯಿಲ್ಲದಿದ್ದರೂ ಭಾವನೆಗಳ ಮೂಲಕವೇ ಕೃತಜ್ಞತೆ ಸಲ್ಲಿಸಿದ 95 ವರ್ಷ ಮೇಲ್ಪಟ್ಟ ಅಜ್ಜಿಯೊಬ್ಬರ ಸಂಭ್ರಮವನ್ನು ಕಂಡಾಗ, ನಮ್ಮ ಕೆಲಸಕ್ಕೆ ಒಂದು ದೈವಿಕ ತೃಪ್ತಿ ಸಿಕ್ಕಂತಾಯಿತು. ಇಂತಹ ಕ್ಷಣಗಳು ಈ ಯೋಜನೆಯ ಪ್ರಾಮುಖ್ಯತೆಯನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ.







# ಫಲಾನುಭವಿಗಳ ಮನದಾಳದ ಮಾತು

## ಅಲೆಮಾರಿ ಬದುಕಿನಿಂದ ನೆಮ್ಮದಿಯ ಗೂಡಿನೆಡೆಗೆ



### 30 ವರ್ಷಗಳ ಬಳಿಕ ಅಧಿಕೃತ ದಾಖಲೆ

“ಸುಮಾರು 30 ವರ್ಷಗಳಿಂದ ನಮಗೆ ಯಾವುದೇ ದಾಖಲೆಗಳಿರಲಿಲ್ಲ. ಈಗ ಸರ್ಕಾರದಿಂದ ನಮಗೆ ದಾಖಲೆಗಳನ್ನು ಮಾಡಿಕೊಟ್ಟಿದ್ದಾರೆ, ಇದರಿಂದ ನಮಗೆ ತುಂಬಾ ಸಂತೋಷವಾಗಿದೆ.”

- **ಶ್ರೀಮತಿ ಕಲಾವತಿ, ಕದರನಹಳ್ಳಿ ತಾಂಡ**

### ಗುಡಿಸಲಿನಿಂದ ಲೇಔಟ್ ನೆಮ್ಮದಿ: ಶೈಕ್ಷಣಿಕ ಜಾಗೃತಿ

“ಹಕ್ಕುಪತ್ರ ಮತ್ತು ಲೇಔಟ್ ಸೌಲಭ್ಯದಿಂದಾಗಿ ನಮಗೆ ಈಗ ಆಧಾರ್, ರೇಷನ್ ಕಾರ್ಡ್‌ಗಳಂತಹ ಅಧಿಕೃತ ದಾಖಲೆಗಳು ದೊರೆತಿವೆ. ಇದರಿಂದ ಕಾಡು ಪ್ರಾಣಿಗಳ ಭಯವಿಲ್ಲದ ನೆಮ್ಮದಿಯ ವಾಸಸ್ಥಾನ ಸಿಕ್ಕಂತಾಗಿದ್ದು, ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೂ ದಾರಿಯಾಗಿದೆ.”

- **ಶ್ರೀಮತಿ ಅಶ್ವಿನಿ.**





### 50 ವರ್ಷಗಳ ಕಾಯುವಿಕೆಗೆ ಹಕ್ಕುಪತ್ರದ ಸಿಹಿ

“ಕಳೆದ 50 ವರ್ಷಗಳಿಂದ ಸೌಲಭ್ಯಗಳಿಲ್ಲದೆ ಕದರನಹಳ್ಳಿ ತಾಂಡಾದಲ್ಲಿ ವಾಸಿಸುತ್ತಿದ್ದ ನಮಗೆ, ಈಗ ಸರ್ಕಾರವು ಹಕ್ಕುಪತ್ರ ಮತ್ತು ಖಾತೆ ಮಾಡಿಕೊಟ್ಟಿರುವುದು ನಮ್ಮ ಲಂಬಾಣಿ ಜನಾಂಗಕ್ಕೆ ತುಂಬು ಸಂತಸ ತಂದಿದೆ.”

- **ಶ್ರೀ ಮುನಿಸ್ವಾಮಿ ನಾಯಕ, ಕದರನಹಳ್ಳಿ ತಾಂಡ**



### 38 ವರ್ಷಗಳ ನಂತರ ಸ್ವಂತ ಮನೆಯ ಹಕ್ಕು

“ನಾವು ಇಲ್ಲಿ ಸುಮಾರು 38 ವರ್ಷಗಳಿಂದ ವಾಸವಾಗಿದ್ದರೂ, ಇದುವರೆಗೂ ನಮಗೆ ಹಕ್ಕು ಪತ್ರ ಸಿಕ್ಕಿರಲಿಲ್ಲ. ಈಗ ನಮಗೆ ಹಕ್ಕು ಪತ್ರ ದೊರೆತಿರುವುದು ತುಂಬಾ ಸಂತೋಷ ತಂದಿದೆ, ಇದರಿಂದ ನಮಗೆ ಬಹಳ ಅನುಕೂಲವಾಗಿದೆ.”

- **ಶ್ರೀ ಗೋವಿಂದಯ್ಯ, ಗೆಂಗನಹಳ್ಳಿ ಗ್ರಾಮ**



ಕದರನಹಳ್ಳಿ ಗ್ರಾಮ, ತುಮಕೂರು ತಾಲೂಕು






















# ಗುಬ್ಬಿ

ತೆಂಗು ಮತ್ತು ಅಡಿಕೆ ತೋಟಗಳಿಂದ ಕಂಗೊಳಿಸುವ ಗುಬ್ಬಿ ತಾಲೂಕು, ತುಮಕೂರು ಜಿಲ್ಲೆಯ ಪ್ರಮುಖ ಕೃಷಿ ಮತ್ತು ವಾಣಿಜ್ಯ ಕೇಂದ್ರವಾಗಿದೆ. ಅವಿಭಕ್ತ ಕುಟುಂಬಗಳೇ ಹೆಚ್ಚಾಗಿರುವ ಈ ಮಣ್ಣಿನಲ್ಲಿ, ತಲೆಮಾರುಗಳಿಂದ ಬೆಸೆದುಕೊಂಡಿದ್ದ ಕೃಷಿ ಭೂಮಿಯ ಜಂಟಿ ಮಾಲೀಕತ್ವದ ಗೊಂದಲಗಳಿಗೆ 'ಕಂದಾಯ ಸಮಾವೇಶ'ವು ಮುಕ್ತಿ ಹಾಡಿದೆ. ಕೃಷಿಕರ ಬೇರುಗಳಿಗೆ ಆಡಳಿತಾತ್ಮಕ ನೀರೆರೆದು, ಅವರ ಹಕ್ಕುಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸುವಲ್ಲಿ ಈ ಅಭಿಯಾನವು ಐತಿಹಾಸಿಕ ಹೆಜ್ಜೆಯಿಟ್ಟಿದೆ.



# ಪ್ರಗತಿಯ ಮೈಲಿಗಲ್ಲುಗಳು

**7828 ಕ್ಕೂ**

ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**4743**

ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**809**

ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**2314 ಕ್ಕೂ**

ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.







## ಆರತಿ ಬಿ. ಕೆ.ಎ.ಎಸ್

**ತಹಶೀಲ್ದಾರ್**

ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಅವಿಭಕ್ತ ಕುಟುಂಬಗಳ ಪಹಣಿ ವಿಭಜನೆ ಮತ್ತು ವಾಣಿಜ್ಯ ಬೆಳೆಗಾರರ ಪೋಡಿ ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸುವುದು. ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ಸಾಮಾಜಿಕ ಭದ್ರತೆಯ 'ಪಿಂಚಣಿ' ಮತ್ತು 'ಇ-ಸ್ವತ್ತು' ತಲುಪಿಸುವುದು.

## ಕೈಗೊಂಡ ಕ್ರಮಗಳು

### ಕಂದಾಯ ಗ್ರಾಮ ಮತ್ತು ಪೌತಿ ಖಾತೆ ಆಂದೋಲನ

ಅಧಿಕಾರಿಗಳೇ ಖುದ್ದಾಗಿ ಹಳ್ಳಿಗಳಿಗೆ ಭೇಟಿ ನೀಡಿ, ವಾರಸುದಾರರ ಸಮ್ಮುಖದಲ್ಲಿ ಮೃತಪಟ್ಟವರ ಹೆಸರಿನಲ್ಲಿದ್ದ ಜಮೀನುಗಳ (ಪೌತಿ ಖಾತೆ) ತ್ವರಿತ ವರ್ಗಾವಣೆ.

### ಪೋಡಿ ದುರಸ್ತಿ ಮತ್ತು ವಿಭಜನೆ

ವಾಣಿಜ್ಯ ಬೆಳೆಗಳಿರುವ ಜಮೀನುಗಳಲ್ಲಿ ಡ್ರೋನ್ ಮತ್ತು ಜಿ.ಐ.ಎಸ್ ತಂತ್ರಜ್ಞಾನದ ಮೂಲಕ ನಿಖರ ಅಳತೆ ಮಾಡಿ, ಜಂಟಿ ಪಹಣಿಗಳ ವಿಭಜನೆ.

### ತ್ವರಿತ ವಿಲೇವಾರಿ ಪಡೆ

ಹಿರಿಯ ರೈತರು ಮತ್ತು ಮಹಿಳೆಯರಿಗೆ ಅಲೆದಾಟವಿಲ್ಲದೆ, ಅವರ ಗ್ರಾಮಗಳಲ್ಲೇ 'ಪಿಂಚಣಿ' ಸೌಲಭ್ಯದ ಮಂಜೂರಾತಿ.



ಚಾಕೆನಹಳ್ಳಿ, ಗುಬ್ಬಿ ತಾಲೂಕ

# ಆಡಳಿತದ ಸ್ಪಂದನೆ

## ಇ-ಪೌತಿ ಆಂದೋಲನದ ಯಶಸ್ವಿ ಹೆಜ್ಜೆಗಳು

### ಗುಬ್ಬಿ ತಾಲ್ಲೂಕಿನಲ್ಲಿ ಇ-ಪೌತಿ ಆಂದೋಲನ: ಮೃತ ರೈತರ ಖಾತೆಗಳ ವರ್ಗಾವಣೆಗೆ ಚಾಲನೆ

ಗುಬ್ಬಿ ತಾಲ್ಲೂಕಿನಲ್ಲಿ ಇತ್ತೀಚೆಗೆ ನಡೆಸಲಾದ ಆಧಾರ್ ಸೀಡಿಂಗ್ ಪ್ರಕ್ರಿಯೆಯ ಸಂದರ್ಭದಲ್ಲಿ, ಸುಮಾರು 64,000 ಫಲಾನುಭವಿಗಳು ಮರಣ ಹೊಂದಿರುವುದು ಪತ್ತೆಯಾಗಿದೆ. ಈ ಮೃತಪಟ್ಟ ವ್ಯಕ್ತಿಗಳ ಹೆಸರಿನಲ್ಲಿದ್ದ ಜಮೀನು ಮತ್ತು ಇತರ ಸೌಲಭ್ಯಗಳ ಖಾತೆಗಳನ್ನು ಅವರ ಕಾನೂನುಬದ್ಧ ವಾರಸುದಾರರಿಗೆ ವರ್ಗಾಯಿಸಲು ಸರ್ಕಾರವು 'ಇ-ಪೌತಿ ಆಂದೋಲನ'ದ ಮೂಲಕ ವಿಶೇಷ ಕ್ರಮ ಕೈಗೊಂಡಿದೆ.

ಈ ಯೋಜನೆಯಡಿ ಕಂದಾಯ ಇಲಾಖೆಯ ಅಧಿಕಾರಿಗಳು ನೇರವಾಗಿ ಫಲಾನುಭವಿಗಳ ಮನೆಬಾಗಿಲಿಗೆ ಭೇಟಿ ನೀಡುತ್ತಿದ್ದಾರೆ. ವಾರಸುದಾರರಿಂದ ಅಗತ್ಯವಿರುವ ಓಟಿಪಿ ಮತ್ತು ದಾಖಲೆಗಳನ್ನು ಪಡೆದು, ಸ್ಥಳದಲ್ಲೇ ಪೌತಿ ಖಾತೆಗಳನ್ನು ವರ್ಗಾಯಿಸಿಕೊಡುತ್ತಿದ್ದಾರೆ. ಗುರುತಿಸಲಾದ ಒಟ್ಟು 64,000 ಪ್ರಕರಣಗಳ ಪೈಕಿ ಈಗಾಗಲೇ ಸುಮಾರು 20,000 ದಿಂದ 25,000 ಖಾತೆಗಳ ವರ್ಗಾವಣೆ ಪ್ರಕ್ರಿಯೆಯು ಈ ಆಂದೋಲನದ ಮೂಲಕ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಈ ಮಹತ್ವದ ಬದಲಾವಣೆಯಿಂದಾಗಿ, ಮರಣ ಹೊಂದಿದವರ ಹೆಸರಿನಲ್ಲಿ ಖಾತೆಗಳಿದ್ದ ಕಾರಣ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದ ರೈತರಿಗೆ ದೊಡ್ಡ ಸಮಾಧಾನ ಸಿಕ್ಕಂತಾಗಿದೆ. ಪಿ.ಎಂ. ಕುಸುಮ್ ಸೇರಿದಂತೆ ಸರ್ಕಾರದ ವಿವಿಧ ಕೃಷಿ ಸಂಬಂಧಿತ ಯೋಜನೆಗಳ ಲಾಭವನ್ನು ವಾರಸುದಾರರು ಈಗ ನೇರವಾಗಿ ಪಡೆಯಲು ಈ ಅಭಿಯಾನವು ದಾರಿ ಮಾಡಿಕೊಟ್ಟಿದೆ.







# ಫಲಾನುಭವಿಗಳ ಮನದಾಳದ ಮಾತು

## ಲಂಚಮುಕ್ತ, ಪಾರದರ್ಶಕ ಆಡಳಿತದ ಭರವಸೆ



### 20 ವರ್ಷಗಳ ಕಾಯುವಿಕೆಗೆ ಮನೆಬಾಗಿಲಲ್ಲೇ ಪರಿಹಾರ

“ನಮ್ಮ ಯಜಮಾನರು ತೀರಿಹೋದ 20 ವರ್ಷಗಳಿಂದ ಹೊಲವಿದ್ದರೂ ಯಾವುದೇ ಅಧಿಕೃತ ದಾಖಲೆಗಳಿರಲಿಲ್ಲ. ಆದರೆ ಈಗ ಅಧಿಕಾರಿಗಳೇ ನಮ್ಮ ಮನೆಗೆ ಬಂದು, ಸ್ಥಳದಲ್ಲೇ ಓಟಿಪಿ ಮೂಲಕ ಪಹಣಿ ಮತ್ತು ಖಾತೆ ಮಾಡಿಕೊಟ್ಟಿದ್ದಾರೆ. ಇಷ್ಟು ವರ್ಷಗಳ ದಾಖಲಾತಿ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಿ, ನಮ್ಮ ಹೆಸರಿಗೆ ಹೊಲದ ಹಕ್ಕು ವರ್ಗಾವಣೆ ಮಾಡಿಕೊಟ್ಟಿರುವುದು ನಮಗೆ ದೊಡ್ಡ ನೆಮ್ಮದಿ ತಂದಿದೆ.”

- **ಶ್ರೀಮತಿ ಗುಲಾಬ್, ಚಾಕೇನಹಳ್ಳಿ**



### ಗ್ರಾಮಕ್ಕೆ ಮೂಲಭೂತ ಸೌಲಭ್ಯ ಮತ್ತು ಹಕ್ಕುಪತ್ರ

“ನಮ್ಮ ಚಾಕೆನಹಳ್ಳಿ ಇಸ್ಲಾಂ ನಗರ ಗ್ರಾಮವನ್ನು ಗುರುತಿಸಿ, ನಮಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಕಂದಾಯ ಇಲಾಖೆಯ ವತಿಯಿಂದ ನಮಗೆ ಹಕ್ಕುಪತ್ರಗಳನ್ನು ತಲುಪಿಸಿದ್ದಕ್ಕಾಗಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಿಬ್ಬಂದಿಗೂ ನಾವು ಕೃತಜ್ಞರಾಗಿದ್ದೇವೆ. ಹಾಗೆಯೇ, ನಮ್ಮ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಗ್ರಾಮ ಪಂಚಾಯಿತಿಗೂ ನಮ್ಮ ಧನ್ಯವಾದಗಳು.”

- **ಚಾಕೆನಹಳ್ಳಿ ಇಸ್ಲಾಂ ನಗರದ ನಿವಾಸಿ**

### ಒಂದು ರೂಪಾಯಿ ಲಂಚವಿಲ್ಲದೆ ಪೌತಿ ಖಾತೆ

“ನಮ್ಮ ತಂದೆ ತೀರಿಹೋದ ನಂತರ, ಗ್ರಾಮದ ಕಾರ್ಯದರ್ಶಿಗಳು ಮತ್ತು ಗ್ರಾಮ ಸೇವಕರು ನಮ್ಮ ಮನೆಗೇ ಬಂದು ಲಂಚವಿಲ್ಲದೆ ಪೌತಿ ಖಾತೆ ಮಾಡಿಕೊಟ್ಟರು. ಸರ್ಕಾರದ ಯಾವುದೇ ಸೌಲಭ್ಯಗಳಿದ್ದರೂ ಅಧಿಕಾರಿಗಳೇ ಮನೆಗೆ ಬಂದು ಮಾಹಿತಿ ನೀಡಿ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ.”

- **ಶ್ರೀ ಕೆ. ನಾಗರಾಜು, ಕೆರೆಹಗಲಹಳ್ಳಿ**




ಚಾಕೇನಹಳ್ಳಿ ಗ್ರಾಮ, ಗುಬ್ಬಿ ತಾಲೂಕು











# ಕುಣಿಗಲ್

ಐತಿಹಾಸಿಕ ಸ್ಟಡ್ ಫಾರ್ಮ್ ಹಾಗೂ ವಿಸ್ತಾರವಾದ ‘ಕುಣಿಗಲ್ ದೊಡ್ಡಕೆರೆ’ಯಿಂದಾಗಿ ನಾಡಿನಾದ್ಯಂತ ಹೆಸರುವಾಸಿಯಾಗಿರುವ ಕುಣಿಗಲ್, ಕೃಷಿ ಮತ್ತು ರೇಷ್ಮೆ ಬೆಳೆಯನ್ನೇ ಪ್ರಮುಖವಾಗಿ ನೆಚ್ಚಿಕೊಂಡಿರುವ ತಾಲೂಕು. ಹಸಿರಿನಿಂದ ಕಂಗೊಳಿಸುವ ಈ ಭಾಗದ ಜನತೆಗೆ ದಶಕಗಳಿಂದ ಕಾಡುತ್ತಿದ್ದ ಜಮೀನಿನ ಗಡಿ ಮತ್ತು ವಾರಸುದಾರಿಕೆ ಸಮಸ್ಯೆಗಳಿಗೆ ’ಕಂದಾಯ ಸಮಾವೇಶ’ವು ಶಾಶ್ವತ ಪರಿಹಾರ ಒದಗಿಸಿ, ಅವರ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿದೆ.



# ಪ್ರಗತಿಯ ಮೈಲಿಗಲ್ಲುಗಳು

**9110 ಕ್ಕೂ**

ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**648**

ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**529**

ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**3610 ಕ್ಕೂ**

ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.



ಚಿಕ್ಕಮಾಳಲವಾಡಿ ಗ್ರಾಮ, ಕುಣಿಗಲ್ ತಾಲೂಕು





## ಎನ್. ಆರ್. ಕರಿಯನಾಯಕ್

ಕೆ.ಎ.ಎಸ್

**ತಹಶೀಲ್ದಾರ್**

ರೈತರು ಮತ್ತು ದಲಿತ ಸಮುದಾಯದವರ ಭೂ-ವಿವಾದಗಳನ್ನು ಸ್ಥಳದಲ್ಲೇ ಬಗೆಹರಿಸುವುದು. ಪೌತಿ ಖಾತೆ, ಇ-ಸ್ವತ್ತು ಮತ್ತು ಪಿಂಚಣಿ ಸೌಲಭ್ಯಗಳನ್ನು ತಡಮಾಡದೆ ಅವರ ಮನೆಬಾಗಿಲಿಗೇ ತಲುಪಿಸಿ, ಆಡಳಿತವನ್ನು ಜನಪರವಾಗಿಸುವುದು.

## ಪ್ರಮುಖ ಸವಾಲುಗಳು

### ಗ್ರಾಮ ಮಟ್ಟದ ಅಭಿಯಾನ

'ಕಂದಾಯ ಗ್ರಾಮ' ಯೋಜನೆಯಡಿ ಅಧಿಕಾರಿಗಳೇ ಹಳ್ಳಿಗಳಿಗೆ ಭೇಟಿ ನೀಡಿ, ಕಂದಾಯ ಅದಾಲತ್ ಮೂಲಕ ಬಾಕಿ ಉಳಿದಿದ್ದ ಕಡತಗಳ ತ್ವರಿತ ವಿಲೇವಾರಿ.

### ತಂತ್ರಜ್ಞಾನದ ಅಳವಡಿಕೆ

ಗಡಿ ವಿವಾದಗಳನ್ನು ಶಾಶ್ವತವಾಗಿ ಪರಿಹರಿಸಲು ಡ್ರೋನ್ ಸಮೀಕ್ಷೆ ಮತ್ತು ಡಿಶಾಂಕ್ ತಂತ್ರಜ್ಞಾನದ ನಿಖರ ಬಳಕೆ.

### ಅರ್ಹರಿಗೆ ಪಿಂಚಣಿ ಸೌಲಭ್ಯ

ವೃದ್ಧರು, ವಿಧವೆಯರು ಮತ್ತು ವಿಶೇಷ ಚೇತನರಿಗೆ ಯಾವುದೇ ಅಲೆದಾಟವಿಲ್ಲದೆ 'ಪಿಂಚಣಿ' ಮಂಜೂರು ಮಾಡುವ ಮನೆಬಾಗಿಲಿನ ಸೇವೆ.




ಚಿಕ್ಕಮಲಳವಡಿ ಗ್ರಾಮ, ಕುಣಿಗಲ್ ತಾಲೂಕ

# ಆಡಳಿತದ ಸ್ಪಂದನೆ

## ಮನೆಬಾಗಿಲಿಗೆ ಕಂದಾಯ ಸೇವೆಗಳು

**ಕುಣಿಗಲ್ ತಾಲೂಕಿನ ಕಂದಾಯ ಸುಧಾರಣೆಗಳ ಕುರಿತಾದ ವರದಿ**

ಕುಣಿಗಲ್ ತಾಲೂಕಿನಲ್ಲಿ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾದ ಈ-ಪೌತಿ ಖಾತಾ, ಪೋಡಿ ಮುಕ್ತ ಗ್ರಾಮ, ಕಂದಾಯ ಗ್ರಾಮಗಳ ರಚನೆ ಹಾಗೂ ಹಕ್ಕುಪತ್ರಗಳ ವಿತರಣೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಕಂದಾಯ ಸಚಿವರಾದ ಶ್ರೀ ಕೃಷ್ಣ ಬೈರೇಗೌಡರ ಮಾರ್ಗದರ್ಶನದಲ್ಲಿ ಈ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ಸಾಮಾನ್ಯ ಜನರ ಮತ್ತು ರೈತರ ದಶಕಗಳ ಸಮಸ್ಯೆಗಳಿಗೆ ಈಗ ಶಾಶ್ವತ ಪರಿಹಾರ ದೊರೆಯುತ್ತಿದೆ.

ವಿಶೇಷವಾಗಿ, ಕಂದಾಯ ಇಲಾಖೆಯು ರೈತ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ರೈತರು ಜಮೀನು ಕೆಲಸಗಳಿಗೆ ತೆರಳುವ ಮುನ್ನವೇ ಅವರ ಮನೆಬಾಗಿಲಿಗೆ ಸೇವೆ ತಲುಪಿಸುತ್ತಿದೆ. ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ನಿರೀಕ್ಷಕರು ಮತ್ತು ಉಪತಹಶೀಲ್ದಾರರು ಬೆಳಿಗ್ಗೆ 7 ಗಂಟೆಯಿಂದಲೇ ರೈತರನ್ನು ಭೇಟಿ ಮಾಡಿ ದಾಖಲೆಗಳ ಕೆಲಸಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ಇದು ಆಡಳಿತ ವ್ಯವಸ್ಥೆಯು ಜನರ ಬಳಿಗೆ ಹೋಗುವ ಹೊಸ ಪದ್ಧತಿಗೆ ನಾಂದಿ ಹಾಡಿದೆ.

ಕಳೆದ 15 ರಿಂದ 30 ವರ್ಷಗಳಿಂದ ಖಾತೆ ಬದಲಾವಣೆಯಾಗದೆ ಸಂಕಷ್ಟದಲ್ಲಿದ್ದ ರೈತರ ಅಳಲನ್ನು ಈ ಯೋಜನೆಯು ದೂರ ಮಾಡಿದೆ. ಜಿಲ್ಲಾಧಿಕಾರಿಗಳಾದ ಶುಭ ಕಲ್ಯಾಣ್ ಅವರ ನಿರಂತರ ಮೇಲ್ವಿಚಾರಣೆ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯಿಂದಾಗಿ, ಕಳೆದ ಕೇವಲ ಎರಡು ತಿಂಗಳ ಅವಧಿಯಲ್ಲಿ ಸುಮಾರು 3,500 ಈ-ಪೌತಿ ಖಾತೆಗಳನ್ನು ಪೂರ್ಣಗೊಳಿಸಲಾಗಿದೆ. ಈ ಸಾಧನೆಯು ತಾಲೂಕಿನ ಕಂದಾಯ ಇಲಾಖೆಯ ದಕ್ಷತೆಗೆ ಸಾಕ್ಷಿಯಾಗಿದೆ.



# ಫಲಾನುಭವಿಗಳ ಮನದಾಳದ ಮಾತು

## ಕಚೇರಿ ಅಲೆದಾಟದಿಂದ ಮುಕ್ತಿ



### 30-40 ವರ್ಷಗಳ ಹಳೆಯ ದಾಖಲೆಗಳ ಸರಿಪಡಿಸುವಿಕೆ

“ ಸುಮಾರು 30–40 ವರ್ಷಗಳಿಂದ ಪಹಣಿಯಲ್ಲಿ ನಮ್ಮ ಹೆಸರೇ ಇರಲಿಲ್ಲ, ತಾತ-ಮುತ್ತಾತಂದಿರ ಕಾಲದ ಹಳೆಯ ಹೆಸರುಗಳೇ ದಾಖಲಾಗಿದ್ದವು. ಕುಣಿಗಲ್ ತಾಲೂಕಿನ ಅಧಿಕಾರಿಗಳ ಮಾರ್ಗದರ್ಶನದಲ್ಲಿ, ಗ್ರಾಮ ಲೆಕ್ಕಾಧಿಕಾರಿ ಮುರಳಿ ಸರ್ ಅವರು ಮಹಜರು ನಡೆಸಿ ‘ಪೋತಿ ಖಾತೆ’ ಯಶಸ್ವಿಯಾಗಿ ಮಾಡಿದ್ದಾರೆ. ಹಿಂದೆ ವಂಶವೃಕ್ಷ ಮಾಡಿಸಬೇಕಾದರೆ 15–20 ದಿನ ಬೇಕಾಗುತ್ತಿತ್ತು, ಇಂದು ಕೇವಲ ಒಂದು ಗಂಟೆಯಲ್ಲಿ ಸಿದ್ಧಪಡಿಸಿದ್ದಾರೆ. ”

- **ಶ್ರೀ ಸುರೇಶ್, ಚಿಕ್ಕಮಳವಡಿ ಗ್ರಾಮ**



### ತಾಲ್ಲೂಕು ಕಚೇರಿ ಭಯ ದೂರವಾಗಿದೆ

“ ತಾಲ್ಲೂಕು ಕಚೇರಿಗೆ ಹೋಗಬೇಕೆಂದರೆ ಒಂದು ಭಯ ಇರುತ್ತಿತ್ತು, ಆದರೆ ಈಗ ನಮ್ಮ ತಹಶೀಲ್ದಾರ್ ಸಾಹೇಬರು ಆ ಭಯ ದೂರ ಮಾಡಿದ್ದಾರೆ. ನಮ್ಮೂರಲ್ಲಿ ಹೆಚ್ಚಿನವರು ಇ-ಖಾತೆ, ಪೌತಿ ಖಾತೆಗಳನ್ನು ಮಾಡಿಸಿಕೊಂಡಿದ್ದಾರೆ. ನಮ್ಮ ವಿಷಯಕ್ಕೂ 10 ರಿಂದ 12 ವರ್ಷಗಳಾಗಿ ಬಾಕಿಯಿತ್ತು, ಮುರಳಿ ಸಾಹೇಬರು ನಮ್ಮ ಮನೆ ಬಾಗಿಲಿಗೆ ಬಂದು ಕೇವಲ 20 ದಿನಗಳೊಳಗೆ ಖಾತೆ ಮಾಡಿಕೊಟ್ಟಿದ್ದಾರೆ. ”

- **ಶ್ರೀ ನಾಗರಾಜ್, ಚಿಕ್ಕಮೊಳವಟ್ಟಿ ಗ್ರಾಮ**

### ಉಚಿತ ಹಕ್ಕುಪತ್ರ ವಿತರಣೆ

“ ನಮಗೆ ವಾಸವಿರುವ ಮನೆಗೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ದಾಖಲೆಗಳು ಇರಲಿಲ್ಲ. ಈಗ ಕಂದಾಯ ಇಲಾಖೆಯ ಅಧಿಕಾರಿಗಳು ನಮ್ಮ ಮನೆಗೆ ನೇರವಾಗಿ ಭೇಟಿ ನೀಡಿ, ಉಚಿತವಾಗಿ ‘ಹಕ್ಕುಪತ್ರ’ವನ್ನು ನೋಂದಣಿ ಮಾಡಿಕೊಟ್ಟಿದ್ದಾರೆ. ಯಾವುದೇ ಖರ್ಚಿಲ್ಲದೆ ನಮಗೆ ಹಕ್ಕುಪತ್ರ ದೊರೆತಿರುವುದು ತುಂಬಾ ಸಂತೋಷ ತಂದಿದೆ. ”

- **ಶ್ರೀ ಮಹಲಿಂಗಯ್ಯ, ದೊಡ್ಡಮಾವಡಿ ಗೊಲ್ಲರಹಟ್ಟಿ**
















# ತಿಪಟೂರು

‘ಕಲ್ಪತರು ನಾಡು’ ಎಂದೇ ಪ್ರಖ್ಯಾತವಾಗಿರುವ ತಿಪಟೂರು, ರಾಜ್ಯದ ಪ್ರಮುಖ ವಾಣಿಜ್ಯ ಕೃಷಿ ಮತ್ತು ಕೊಬ್ಬರಿ ವಹಿವಾಟಿನ ಕೇಂದ್ರವಾಗಿದೆ. ತೆಂಗಿನ ತೋಟಗಳೇ ಇಲ್ಲಿನ ಜನರ ಬದುಕಿನ ಜೀವಾಳ. ಇಂತಹ ಸಮೃದ್ಧ ನೆಲದಲ್ಲಿ, ಜಂಟಿ ಕುಟುಂಬಗಳ ನಡುವಿನ ಭೂ-ವಿವಾದಗಳು ಮತ್ತು ಆನುವಂಶಿಕ ದಾಖಲೆಗಳ ಕೊರತೆಯು ಕೃಷಿ ಅಭಿವೃದ್ಧಿಗೆ ತೊಡಕಾಗಿತ್ತು. ‘ಕಂದಾಯ ಸಮಾವೇಶವು’ ಈ ತೊಡಕುಗಳನ್ನು ನಿವಾರಿಸಿ, ರೈತರ ಬೆವರು ಸುರಿಸಿದ ನೆಲಕ್ಕೆ ಅಧಿಕೃತ ಹಕ್ಕಿನ ಭದ್ರತೆಯನ್ನು ಒದಗಿಸಿದೆ.



# ಪ್ರಗತಿಯ ಮೈಲಿಗಲ್ಲುಗಳು

**8872 ಕ್ಕೂ**
ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**1239**
ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**853**
ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**3618 ಕ್ಕೂ**
ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.







## ಮೋಹನ್ ಕುಮಾರ್ ಜಿ. ವಿ. ಕೆ.ಎ.ಎಸ್

**ತಹಶೀಲ್ದಾರ್**

ತಲೆಮಾರುಗಳಿಂದ ಹಂಚಿಕೆಯಾಗದ ವಾಣಿಜ್ಯ ಕೃಷಿ ಭೂಮಿಗಳ (ತೆಂಗಿನ ತೋಟಗಳು) ಪೋಡಿ ಸಮಸ್ಯೆಗಳನ್ನು ಬಗೆಹರಿಸುವುದು. ರೈತರಿಗೆ ಸ್ಪಷ್ಟವಾದ 'ಆರ್.ಟಿ.ಸಿ' ಮತ್ತು ವಸತಿ ಪ್ರದೇಶಗಳಿಗೆ 'ಇ-ಸ್ವತ್ತು' ಒದಗಿಸಿ, ಬ್ಯಾಂಕ್ ಸಾಲ ಮತ್ತು ಸಬ್ಸಿಡಿಗಳಿಗೆ ಸುಲಭ ಪ್ರವೇಶ ಕಲ್ಪಿಸುವುದು.

## ಪ್ರಮುಖ ಸವಾಲುಗಳು

### ಪೋಡಿ ಮತ್ತು ಪೌತಿ ಖಾತೆ ಆಂದೋಲನ

ಅಧಿಕಾರಿಗಳೇ ಹಳ್ಳಿಗಳಿಗೆ ಭೇಟಿ ನೀಡಿ, ಜಂಟಿ ಜಮೀನುಗಳ ಕಂದಾಯ ಅದಾಲತ್ ನಡೆಸಿ ಸ್ಥಳದಲ್ಲೇ ಕಡತಗಳನ್ನು ವಿಲೇವಾರಿ ಮಾಡಿದರು.

### ನಿಖರತೆಗಾಗಿ ತಂತ್ರಜ್ಞಾನ

ದಟ್ಟವಾದ ತೆಂಗಿನ ತೋಟಗಳ ನಡುವೆ ಗಡಿ ಗುರುತಿಸಲು ಡ್ರೋನ್ ಸಮೀಕ್ಷೆ ಮತ್ತು ದಿಶಾಂಕ್ ತಂತ್ರಜ್ಞಾನದ ಸಮರ್ಥ ಬಳಕೆ.

### ಮನೆಬಾಗಿಲಿಗೆ ನೆರವು

ಕಂದಾಯ ಗ್ರಾಮ ಯೋಜನೆಯಡಿ ಹಕ್ಕುಪತ್ರಗಳ ವಿತರಣೆ ಮತ್ತು ಅರ್ಹರಿಗೆ ಮನೆಬಾಗಿಲಿಗೆ 'ಪಿಂಚಣಿ' ಸೌಲಭ್ಯದ ಮಂಜೂರಾತಿ.



# ಆಡಳಿತದ ಸ್ಪಂದನೆ

## ರಾಜ್ಯದಲ್ಲೇ ಅತಿ ಹೆಚ್ಚು ಕಂದಾಯ ಗ್ರಾಮಗಳ ನಿರ್ಮಾಣ

### ಕಂದಾಯ ಗ್ರಾಮಗಳ ರಚನೆ ಮತ್ತು ಹಕ್ಕುಪತ್ರ ವಿತರಣಾ ಅಭಿಯಾನ

ಮಾನ್ಯ ಕಂದಾಯ ಸಚಿವರ ಆಶಯದಂತೆ, ಇಡೀ ರಾಜ್ಯದಲ್ಲಿ ಲಂಬಾಣಿ ತಾಂಡಾ, ಹಟ್ಟಿ ಹಾಗೂ ಜನವಸತಿ ಪ್ರದೇಶಗಳನ್ನು 'ಕಂದಾಯ ಗ್ರಾಮ'ಗಳನ್ನಾಗಿ ಪರಿವರ್ತಿಸುವ ಅಭಿಯಾನವು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ. ಈ ಯೋಜನೆಯಡಿ ತುಮಕೂರು ಜಿಲ್ಲೆಯು ಅಭೂತಪೂರ್ವ ಸಾಧನೆ ಮಾಡಿದ್ದು, ಜಿಲ್ಲೆಯಾದ್ಯಂತ ಸುಮಾರು 22 ಸಾವಿರಕ್ಕೂ ಹೆಚ್ಚು ಕಂದಾಯ ಗ್ರಾಮಗಳನ್ನು ರೂಪಿಸುವ ಮೂಲಕ ಇಡೀ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ.

ತಿಪಟೂರು ತಾಲೂಕಿನಲ್ಲಿ ಈವರೆಗೆ ಒಟ್ಟು 51 ಕಂದಾಯ ಗ್ರಾಮಗಳನ್ನು ಗುರುತಿಸಲಾಗಿದ್ದು, ಇದರಿಂದ ಸುಮಾರು 1300ಕ್ಕೂ ಹೆಚ್ಚು ಫಲಾನುಭವಿಗಳಿಗೆ ನೇರ ಲಾಭ ದೊರೆಯಲಿದೆ. ಕೇವಲ ಕಂದಾಯ ಗ್ರಾಮಗಳನ್ನು ಘೋಷಿಸುವುದು ಮಾತ್ರ ಈ ಅಭಿಯಾನದ ಉದ್ದೇಶವಲ್ಲ; ಬದಲಿಗೆ ಅಲ್ಲಿನ ಪ್ರತಿಯೊಂದು ಮನೆಗೆ ಅಧಿಕೃತ 'ಹಕ್ಕುಪತ್ರ'ಗಳನ್ನು ನೀಡುವುದು ಮತ್ತು 'ಈ-ಸ್ವತ್ತು' ಮೂಲಕ ಅವರಿಗೆ ಕಾನೂನುಬದ್ಧ ಆಸ್ತಿ ಹಕ್ಕನ್ನು ಒದಗಿಸುವುದು ನಮ್ಮ ಪ್ರಮುಖ ಗುರಿಯಾಗಿದೆ.

ಈ ಬೃಹತ್ ಸಾಧನೆಯು ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳಿಂದ ಹಿಡಿದು ಎಲ್ಲಾ ಹಂತದ ಅಧಿಕಾರಿಗಳವರೆಗೆ, ಒಂದು ಸಮರ್ಪಿತ ತಂಡವಾಗಿ ಹಗಲಿರುಳು ಶ್ರಮಿಸಿರುವುದರ ಫಲವಾಗಿದೆ. ಈ ಯೋಜನೆಯು ಗ್ರಾಮೀಣ ಭಾಗದ ಜನರ ಜೀವನದಲ್ಲಿ ಭದ್ರತೆ ಮತ್ತು ನೆಮ್ಮದಿಯನ್ನು ತರಲಿದೆ.





# ಫಲಾನುಭವಿಗಳ ಮನದಾಳದ ಮಾತು

## ಮನೆಬಾಗಿಲಿಗೆ ಕಂದಾಯ ದಾಖಲೆಗಳು



### ಜೀವಂತವಾಗಿರುವವರ ಹೆಸರಿಗೆ ಪಹಣಿ

"ನಮ್ಮ ಜಮೀನಿನ ಪಹಣಿ (ಪೋತಿ ಖಾತೆ) ಕಳೆದ 30–40 ವರ್ಷಗಳಿಂದ ನಮ್ಮ ತಾತ, ಅಪ್ಪ ಮತ್ತು ತಾಯಿಯ ಹೆಸರಿನಲ್ಲೇ ಇತ್ತು. ಜೀವಂತವಾಗಿರುವವರ ಹೆಸರಿಗೆ ಪಹಣಿ ಇರಬೇಕು ಎಂಬ ಸರ್ಕಾರದ ಆದೇಶದಂತೆ, ಅಧಿಕಾರಿಗಳು ನಮ್ಮ ಮನೆಬಾಗಿಲಿಗೆ ಬಂದು ಕೇವಲ 15 ದಿನಗಳೊಳಗೆ ಪೋತಿ ಖಾತೆ ಮಾಡಿಕೊಟ್ಟಿದ್ದಾರೆ. ಇಷ್ಟು ವರ್ಷಗಳಿಂದ ಆಗದಿದ್ದ ಕೆಲಸ ಈಗ ಅತ್ಯಂತ ವೇಗವಾಗಿ ನೆರವೇರಿದೆ."

- **ಶ್ರೀ ಚಿಕ್ಕನರಸಯ್ಯ, ಎಕ್ಸಿಗಟ್ಟೆ ಗ್ರಾಮ**



### ಪತಿ ನಿಧನದ ನಂತರ 15 ದಿನಗಳಲ್ಲಿ ಖಾತೆ

"ನಮ್ಮದು ತಾತ-ಮುತ್ತಾತಂದಿರ ಕಾಲದಿಂದಲೂ ವಾಸವಾಗಿರುವ ಜಾಗ, ಆದರೆ ಇದುವರೆಗೆ ಯಾವುದೇ ಅಧಿಕೃತ ಖಾತೆ ಇರಲಿಲ್ಲ. ಆರು ತಿಂಗಳ ಹಿಂದೆ ನನ್ನ ಯಜಮಾನರು ತೀರಿಹೋದರು. ಈಗ ಇತ್ತೀಚಿನ 15 ದಿನಗಳಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಸ್ಪಂದಿಸಿ, ನಮ್ಮ ಹೆಸರಿಗೆ ಅಧಿಕೃತವಾಗಿ ಖಾತೆ ಮಾಡಿಕೊಟ್ಟಿದ್ದಾರೆ."

- **ಶ್ರೀಮತಿ ರತ್ನಮ್ಮ, ಎಕ್ಸಿಗಟ್ಟೆ ಗ್ರಾಮ**

### 20 ವರ್ಷಗಳಿಂದ ಬಾಕಿ ಇದ್ದ ಪೋಡಿ ಖಾತೆ ವಾರದಲ್ಲಿ ಪೂರ್ಣ

"ಇಂದು ಭೂ ದಾಖಲೆಗಳು ಮತ್ತು ಪಹಣಿಗೆ ಸಂಬಂಧಿಸಿದ ಕೆಲಸಗಳಿಗಾಗಿ ಅಧಿಕಾರಿಗಳೇ ನೇರವಾಗಿ ರೈತರ ಮನೆಬಾಗಿಲಿಗೆ ಬರುತ್ತಿದ್ದಾರೆ. 15-20 ವರ್ಷಗಳಿಂದ ಬಾಕಿ ಉಳಿದಿದ್ದ ಪೋಡಿ ಮತ್ತು ಖಾತೆ ಬದಲಾವಣೆ ಕೆಲಸಗಳು ಈಗ ಕೇವಲ 15 ದಿನಗಳಲ್ಲಿ ಪೂರ್ಣಗೊಳ್ಳುತ್ತಿವೆ. ಸರ್ಕಾರದ ಈ ತ್ವರಿತ ಕ್ರಮದಿಂದ ರೈತರಿಗೆ ತುಂಬಾ ಅನುಕೂಲವಾಗಿದೆ."

- **ಶ್ರೀ ಭೈರಪ್ಪ, ಎಕ್ಸಿಗಟ್ಟೆ ಗ್ರಾಮ**





ಬಸ್ತಿಹಳ್ಳಿ ಗ್ರಾಮ, ತಿಪಟೂರು ತಾಲೂಕು













# ತುರುವೇಕೆರೆ

ಹೊಯ್ಸಳರ ಕಾಲದ ಸುಂದರ ದೇವಾಲಯಗಳು ಮತ್ತು ಕಣ್ಣುಹಾಯಿಸಿದಷ್ಟು ದೂರ ವಿಸ್ತರಿಸಿರುವ ಸಮೃದ್ಧ ತೆಂಗಿನ ತೋಟಗಳಿಗೆ ಹೆಸರಾದ ತುರುವೇಕೆರೆ, ಸಾಂಸ್ಕೃತಿಕ ಹಾಗೂ ಕೃಷಿ ಸಂಪತ್ತಿನ ಬೀಡು. ಆದರೆ, ಇಲ್ಲಿನ ಅನೇಕ ರೈತರು ತಲೆಮಾರುಗಳಿಂದ ತಮ್ಮ ಜಮೀನಿನ ಹಕ್ಕು ಮತ್ತು ಗಡಿ ವಿವಾದಗಳಿಂದ ಕಂಗೆಟ್ಟಿದ್ದರು. ‘ಕಂದಾಯ ಸಮಾವೇಶ’ವು ಈ ಐತಿಹಾಸಿಕ ತಾಲೂಕಿನ ರೈತರ ಬಾಳಿಗೆ ಆಶಾಕಿರಣವಾಗಿ ಬಂದಿದ್ದು, ದಶಕಗಳ ಕಂದಾಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಿದೆ.



# ಪ್ರಗತಿಯ ಮೈಲಿಗಲ್ಲುಗಳು

**7322 ಕ್ಕೂ**

ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**2671**

ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**744**

ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**2478 ಕ್ಕೂ**

ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.







## ಎನ್.ಎ. ಕುಂಜಿ ಅಹಮ್ಮದ್ ಕೆ.ಎ.ಎಸ್

**ತಹಶೀಲ್ದಾರ್**

ತೆಂಗು ಬೆಳೆಗಾರರು ಮತ್ತು ರೈತರ ಅನುವಂಶಿಕ ಭೂ-ವಿವಾದಗಳನ್ನು ಬಗೆಹರಿಸುವುದು ಹಾಗೂ 'ಪೌತಿ ಖಾತೆ' ಮತ್ತು 'ಪೋಡಿ' ಸಮಸ್ಯೆಗಳನ್ನು ನಿರ್ಮೂಲನೆ ಮಾಡಿ ಪ್ರತಿಯೊಂದು ಕುಟುಂಬಕ್ಕೂ ಕಾನೂನುಬದ್ಧ ಹಕ್ಕುಪತ್ರ ನೀಡುವುದು.

## ಪ್ರಮುಖ ಸವಾಲುಗಳು

### ಕಂದಾಯ ಅದಾಲತ್

ಹಳ್ಳಿ ಹಳ್ಳಿಗಳಲ್ಲಿ ಕಂದಾಯ ಅಧಿಕಾರಿಗಳೇ ಮೊಕ್ಕಾಂ ಹೂಡಿ, ರೈತರ ಅಹವಾಲುಗಳನ್ನು ಸ್ಥಳದಲ್ಲೇ ಆಲಿಸಿ ದಾಖಲೆಗಳನ್ನು ಪರಿಶೀಲಿಸಿದರು.

### ತಂತ್ರಜ್ಞಾನದ ಬಳಕೆ

ಡ್ರೋನ್ ಮತ್ತು ಜಿ.ಐ.ಎಸ್ ತಂತ್ರಜ್ಞಾನದ ಹಾಗೂ ದಿಶಾಂಕ್ ಆ್ಯಪ್ ಮೂಲಕ ನಿಖರವಾದ ಭೂ-ಮಾಪನ, ವಿವಾದಮುಕ್ತ ನಕ್ಷೆಗಳ ತಯಾರಿಕೆ.

### ಮನೆಬಾಗಿಲಿಗೆ ನೆರವು

ದರಖಾಸ್ತು ಪೋಡಿ ಮತ್ತು ಪೋಡಿ ದುರಸ್ತಿ ಆಂದೋಲನದ ಮೂಲಕ ಶರವೇಗದಲ್ಲಿ ಕಡತಗಳ ವಿಲೇವಾರಿ ಮಾಡಿ, ಅರ್ಹರಿಗೆ 'ಇ-ಸ್ವತ್ತು' ವಿತರಣೆ.



# ಆಡಳಿತದ ಸ್ಪಂದನೆ

## ದಾಖಲೆರಹಿತ ಬದುಕಿಗೆ ಅಧಿಕೃತತೆಯ ಸ್ಪರ್ಶ

ಮಾನ್ಯ ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಜಿ. ಪರಮೇಶ್ವರ್ ಅವರ ಮಾರ್ಗದರ್ಶನದಲ್ಲಿ ಮತ್ತು ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ, ಕಳೆದ ಒಂದು ವರ್ಷದಿಂದ ತುರುವೇಕೆರೆ ತಾಲೂಕಿನಲ್ಲಿ ಮಹತ್ವದ ಅಭಿಯಾನವೊಂದನ್ನು ಕೈಗೊಳ್ಳಲಾಗಿದೆ. ಸರ್ಕಾರಿ ಹಾಗೂ ಖಾಸಗಿ ಜಮೀನುಗಳು ಸೇರಿದಂತೆ ವಿವಿಧ ದಾಖಲೆರಹಿತ ಪ್ರದೇಶಗಳಲ್ಲಿ ದಶಕಗಳಿಂದ ವಾಸಿಸುತ್ತಿರುವ ಜನವಸತಿಗಳನ್ನು ಗುರುತಿಸುವ ಕಾರ್ಯವನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಈ ಯೋಜನೆಯ ಫಲವಾಗಿ ತುರುವೇಕೆರೆ ತಾಲೂಕಿನ ಸುಮಾರು 89 ಗ್ರಾಮಗಳನ್ನು ನೂತನ ಕಂದಾಯ ಗ್ರಾಮಗಳೆಂದು ಅಧಿಕೃತವಾಗಿ ಘೋಷಿಸಲಾಗಿದೆ. ಈ ಗ್ರಾಮಗಳಲ್ಲಿ ವಾಸಿಸುತ್ತಿರುವ ಸುಮಾರು 3,000 ಕುಟುಂಬಗಳನ್ನು ಗುರುತಿಸಲಾಗಿದ್ದು, ಅವರಿಗೆ ಹಕ್ಕುಪತ್ರಗಳನ್ನು ವಿತರಿಸುವ ಪ್ರಕ್ರಿಯೆಯು ಪ್ರಸ್ತುತ ಪ್ರಗತಿಯಲ್ಲಿದೆ.

ಕಂದಾಯ ಇಲಾಖೆಯ ಸಮಸ್ತ ಅಧಿಕಾರಿಗಳು ಮತ್ತು ನೌಕರರ ಶ್ರಮ ಹಾಗೂ ತಾಲೂಕಿನ ಸಾರ್ವಜನಿಕರ ಸಕ್ರಿಯ ಸಹಕಾರದಿಂದ ಈ ಬೃಹತ್ ಕಾರ್ಯವು ಸಾಕಾರಗೊಂಡಿದೆ. ಈ ಕ್ರಮವು ದಶಕಗಳ ಕಾಲ ಭೂಮಿಯ ಹಕ್ಕಿನಿಂದ ವಂಚಿತರಾಗಿದ್ದ ಸಾವಿರಾರು ಜನರಿಗೆ ಕಾನೂನುಬದ್ಧ ಭದ್ರತೆಯನ್ನು ಒದಗಿಸಿದ್ದು, ಸಾರ್ವಜನಿಕರ ಜೀವನಮಟ್ಟ ಸುಧಾರಿಸಲು ಬಹಳ ಅನುಕೂಲಕರವಾಗಿದೆ.





# ಫಲಾನುಭವಿಗಳ ಮನದಾಳದ ಮಾತು

## ಹಕ್ಕುಪತ್ರ, ಪೌತಿ ಖಾತೆ ಮತ್ತು ಮನೆಬಾಗಿಲಿಗೆ ಸೇವೆ



### ಎಸ್.ಸಿ-ಎಸ್.ಟಿ ಸಮುದಾಯಕ್ಕೆ ಆರ್ಥಿಕ ಭದ್ರತೆ

"ಸರ್ಕಾರಿ ಜಮೀನಿನಲ್ಲಿ 40 ವರ್ಷಗಳಿಂದ ಹಕ್ಕುಪತ್ರವಿಲ್ಲದೆ ವಾಸವಿದ್ದ ನನಗೆ ಈಗ ಕಂದಾಯ ಇಲಾಖೆ ಹಕ್ಕುಪತ್ರ ನೀಡಿದೆ. ನಮ್ಮ ಕಾಲೋನಿಯ ಎಸ್.ಸಿ-ಎಸ್.ಟಿ ಸಮುದಾಯದ ಎಲ್ಲರಿಗೂ ಹಕ್ಕುಪತ್ರ ದೊರೆಯುತ್ತಿರುವುದು ತುಂಬಾ ಸಂತೋಷ ತಂದಿದೆ."

- **ಶ್ರೀ ಚಿಕ್ಕನರಸಯ್ಯ, ಎಕ್ಸಿಗಟ್ಟೆ ಗ್ರಾಮ**



### 45 ವರ್ಷಗಳ ನಂತರ ಮನೆಯ ಅಧಿಕೃತ ಹಕ್ಕು

"ತುರುವೇಕೆರೆ ತಾಲೂಕು ಬಾಣಸಂದ್ರದ ನಿವಾಸಿಯಾದ ನಾನು, ಸುಮಾರು 45 ವರ್ಷಗಳಿಂದ ದಾಖಲೆಗಳಿಲ್ಲದ ಮಾವನವರ ಮನೆಯಲ್ಲಿ ವಾಸವಿದ್ದೆ. ಇಂದು ಕಂದಾಯ ಇಲಾಖೆಯಿಂದ ಹಕ್ಕುಪತ್ರ ದೊರೆತಿರುವುದು ತುಂಬಾ ಸಂತೋಷ ತಂದಿದೆ. ಇನ್ನು ಮುಂದೆ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ನಮಗೆ ಅನುಕೂಲವಾಗುತ್ತದೆ."

- **ಶ್ರೀಮತಿ ಶಶಿಕಲಾ, ಬಾಣಸಂದ್ರ ಗ್ರಾಮ**

### ಬಡವರನ್ನು ಮೇಲ್ದರ್ಜೆಗೇರಿಸಿದ ಸರ್ಕಾರ

"ಸುಮಾರು 40–50 ವರ್ಷಗಳಿಂದ ನಮಗೆ ಮೂಲ ದಾಖಲಾತಿಗಳು ಇರಲಿಲ್ಲ. ಈಗ ಸರ್ಕಾರದ ಸಚಿವರು ಮತ್ತು ಶಾಸಕರ ನೇತೃತ್ವದಲ್ಲಿ ನಡೆದಿರುವ ಈ ಹಕ್ಕುಪತ್ರ ವಿತರಣೆ ಕಾರ್ಯಕ್ರಮವು ಎಸ್ಸಿ ಕಾಲೋನಿಯ ಬಡವರಿಗೆ ಬಹಳ ಅನುಕೂಲಕರವಾಗಿದೆ. ಇದರಿಂದ ನಮಗೆ ಆರ್ಥಿಕವಾಗಿ ಸಹಾಯವಾಗುತ್ತಿದ್ದು, ಬಡವರನ್ನು ಮೇಲ್ದರ್ಜೆಗೆ ತೆಗೆದುಕೊಂಡು ಹೋಗಲು ಸರ್ಕಾರ ಉತ್ತಮ ಅವಕಾಶ ಕಲ್ಪಿಸಿದೆ."

- **ಶ್ರೀ ರಂಗಸ್ವಾಮಿ, ಬಾಣಸಂದ್ರ ಗ್ರಾಮ**





## ಮನೆಬಾಗಿಲಿಗೆ ಒದಗಿಬಂದ ಪಿಂಚಣಿ ಸೌಲಭ್ಯ

" 65 ವರ್ಷದ ನನಗೆ ಹಿಂದೆ ಯಾವುದೇ ಪಿಂಚಣಿ ಇರಲಿಲ್ಲ. ಈಗ ಕಂದಾಯ ಇಲಾಖೆ ಮತ್ತು ತಹಶೀಲ್ದಾರರ ಸಹಕಾರದಿಂದ ತಿಂಗಳಿಗೆ 1200 ರೂ. ಪಿಂಚಣಿ ದೊರೆಯುತ್ತಿದೆ. ಈ ಹಣ ಔಷಧಿ ಮತ್ತು ಮನೆ ಖರ್ಚಿಗೆ ತುಂಬಾ ಸಹಾಯವಾಗುತ್ತಿದೆ. "

- **ಶ್ರೀ ರಂಗರಾಮಯ್ಯ, ಬಾಣಸಂದ್ರ ಗ್ರಾಮ**

## 35 ವರ್ಷಗಳ ಬಾಕಿ ಕೆಲಸ ಮನೆಬಾಗಿಲಲ್ಲೇ ಪೂರ್ಣ

" ನಮ್ಮ ಈ ಜಮೀನು ಕಳೆದ 30–35 ವರ್ಷಗಳಿಂದ ಪೌತಿ ವರ್ಗಾವಣೆ (ಖಾತೆ) ಆಗಿರಲಿಲ್ಲ; ಅದು ನಮ್ಮ ತಾತನವರ ಹೆಸರಲ್ಲೇ ಇತ್ತು. ಈಗ ಅದನ್ನು ಸರಿಯಾಗಿ ಮಾಡಿಕೊಟ್ಟಿದ್ದಾರೆ. ಕೃಷ್ಣ ಬೈರೇಗೌಡ ಅವರು ಸಚಿವರಾದ ನಂತರ, ನಮ್ಮ ವಿ.ಎ. ಹಾಗೂ ಆರ್.ಐ. ಅಧಿಕಾರಿಗಳು ಮತ್ತು ತಹಶೀಲ್ದಾರರು ಎಲ್ಲರೂ ಸೇರಿ ಮನೆ ಬಾಗಿಲಿಗೆ ಬಂದು ಪೌತಿ ವರ್ಗಾವಣೆ ಮಾಡಿಕೊಟ್ಟಿದ್ದಾರೆ. "

- **ಶ್ರೀ ಲೋಕೇಶ್, ಬಾಣಸಂದ್ರ ಗ್ರಾಮ**















ಬಾಣಸಂದ್ರ ಗ್ರಾಮ, ತುರುವೇಕೆರೆ ತಾಲೂಕು















# ಚಿಕ್ಕನಾಯಕನಹಳ್ಳಿ

‘ಕಲ್ಪತರು ನಾಡು’ ತುಮಕೂರಿನ ಪ್ರಮುಖ ವಾಣಿಜ್ಯ ಬೆಳೆಯಾದ ತೆಂಗು ಮತ್ತು ಕೊಬ್ಬರಿ ಉತ್ಪಾದನೆಗೆ ಚಿಕ್ಕನಾಯಕನಹಳ್ಳಿ ಹೆಸರುವಾಸಿ. ಕೃಷಿಯನ್ನೇ ಉಸಿರಾಗಿಸಿಕೊಂಡಿರುವ ಈ ತಾಲೂಕಿನ ರೈತರು ದಶಕಗಳಿಂದ ಜಮೀನಿನ ಗಡಿ ವಿವಾದಗಳು ಮತ್ತು ಜಂಟಿ ಖಾತೆಗಳ ಸಮಸ್ಯೆಯಿಂದ ಬಳಲುತ್ತಿದ್ದರು. ‘ಕಂದಾಯ ಸಮಾವೇಶ’ವು ಈ ಕೃಷಿಕರ ಪಾಲಿಗೆ ಸಂಜೀವಿನಿಯಾಗಿ ಬಂದಿದ್ದು, ತೋಟಗಳ ಅಳತೆ ಮತ್ತು ವಿಭಜನೆಯನ್ನು ಸುಗಮಗೊಳಿಸುವ ಮೂಲಕ ರೈತರ ಬದುಕಿನಲ್ಲಿ ಶಾಶ್ವತ ನೆಮ್ಮದಿಯ ಬೆಳೆ ತೆಗೆದಿದೆ.



# ಪ್ರಗತಿಯ ಮೈಲಿಗಲ್ಲುಗಳು

**9556 ಕ್ಕೂ**
ಹೆಚ್ಚು ಇ-ಪೌತಿ ಪ್ರಕರಣಗಳಿಗೆ ಖಾತೆ ಬದಲಾಯಿಸಲಾಗಿದೆ.

**1980**
ಕಂದಾಯ ಗ್ರಾಮದ ಹಕ್ಕುಪತ್ರಗಳಿಗೆ ಇ-ಸ್ವತ್ತು ಖಾತೆ ಸೃಜಿಸಲಾಗಿದೆ.

**446**
ಪ್ರಕರಣಗಳಿಗೆ ಹೊಸ ಪಹಣಿ ಸೃಜಿಸಲಾಗಿದೆ.

**2218 ಕ್ಕೂ**
ಇಳಿ ವಯಸ್ಸಿನ ವಯೋವೃದ್ಧರು, ವಿಧವೆಯರಿಗೆ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿದೆ.







## ಮಮತ ಎಂ ಕೆ.ಎ.ಎಸ್

**ತಹಶೀಲ್ದಾರ್**

ತೋಟಗಾರಿಕಾ ಜಮೀನುಗಳಲ್ಲಿನ ಕಗ್ಗಂಟಾಗಿದ್ದ 'ಪೋಡಿ' ಸಮಸ್ಯೆಗಳನ್ನು ತಂತ್ರಜ್ಞಾನದ ನೆರವಿನಿಂದ ಬಗೆಹರಿಸುವುದು. ವಾರಸುದಾರರಿಗೆ ಪೌತಿ ಖಾತೆ ಮಾಡಿಕೊಡುವ ಮೂಲಕ ಪ್ರತಿಯೊಬ್ಬ ಕೃಷಿಕನಿಗೂ ಸ್ವತಂತ್ರ ಆರ್.ಟಿ.ಸಿ ಮತ್ತು ವಸತಿಹೀನರಿಗೆ 'ಹಕ್ಕುಪತ್ರ' ಒದಗಿಸುವುದು.

## ಕೈಗೊಂಡ ಕ್ರಮಗಳು

### ಪೋಡಿ, ಪೌತಿ ಆಂದೋಲನ

ಕಂದಾಯ ಅಧಿಕಾರಿಗಳೇ ರೈತರ ತೋಟಗಳಿಗೆ ಭೇಟಿ ನೀಡಿ, 'ಪೋಡಿ ದುರಸ್ತಿ' ಮತ್ತು 'ದರಖಾಸ್ತು ಪೋಡಿ' ಶಿಬಿರಗಳ ಮೂಲಕ ನೂರಾರು ಜಂಟಿ ಖಾತೆಗಳನ್ನು ಪ್ರತ್ಯೇಕಗೊಳಿಸಿದರು.

### ತಂತ್ರಜ್ಞಾನ-ಆಧಾರಿತ ಸಮೀಕ್ಷೆ

ತೋಟಗಳ ನಿಖರ ಅಳತೆಗಾಗಿ ಡ್ರೋನ್ ತಂತ್ರಜ್ಞಾನ ಮತ್ತು ದಿಶಾಂಕ್ ಬಳಸಿ, ಯಾವುದೇ ಭಿನ್ನಾಭಿಪ್ರಾಯಗಳಿಗೆ ಆಸ್ಪದವಿಲ್ಲದಂತೆ ಗಡಿ ನಿಗದಿಪಡಿಸಲಾಯಿತು.

### ತ್ವರಿತ ಸಾಮಾಜಿಕ ಭದ್ರತೆ

ಕಂದಾಯ ಗ್ರಾಮಗಳ ಪರಿಕಲ್ಪನೆಯಡಿ, ವಯೋವೃದ್ಧರು ಮತ್ತು ವಿಧವೆಯರಿಗೆ ಸ್ಥಳದಲ್ಲೇ 'ಪಿಂಚಣಿ' ಮಂಜೂರು ಮಾಡುವ ಮೂಲಕ ಆರ್ಥಿಕ ಬೆಂಬಲ ನೀಡಲಾಯಿತು.



# ಆಡಳಿತದ ಸ್ಪಂದನೆ

## ಕಡುಬಡವರ ಕಣ್ಣೀರೊರೆಸುವ ಕಂದಾಯ ಇಲಾಖೆ

ಗಾಂಧೀಜಿಯವರ ತತ್ವದಂತೆ ಜನರ ಧ್ವನಿಗೆ ಸ್ಪಂದಿಸಿ, ಕಡುಬಡವರ ಕಣ್ಣೀರನ್ನು ಒರೆಸುವುದೇ ಉತ್ತಮ ಆಡಳಿತದ ಲಕ್ಷಣವಾಗಿದೆ. ಈ ಆಶಯದಂತೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವರ ನಿರ್ದೇಶನದ ಮೇರೆಗೆ ನಮ್ಮ ತಾಲೂಕಿನಲ್ಲಿ ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ನೂರಾರು ವರ್ಷಗಳಿಂದ ಗುತ್ತಿಹಟ್ಟಿಗಳು, ತಾಂಡಗಳು ಮತ್ತು ಗೊಲ್ಲರಹಟ್ಟಿಗಳಲ್ಲಿ ವಾಸಿಸುತ್ತಿರುವ ಜನರಿಗೆ ಯಾವುದೇ ಅಧಿಕೃತ ದಾಖಲೆಗಳಿಲ್ಲದ ಕಾರಣ, ಅವರ ಬದುಕು ಅಭದ್ರತೆಯಿಂದ ಕೂಡಿತ್ತು.

ತಮ್ಮ ತಾತ-ಮುತ್ತಾತಂದಿರ ಕಾಲದಿಂದಲೂ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರೂ, ಮಾಲೀಕತ್ವದ ಕಾನೂನುಬದ್ಧ ಭದ್ರತೆ ಈ ಜನರಿಗೆ ಲಭಿಸಿರಲಿಲ್ಲ. ಇಂತಹ ವಸತಿ ಪ್ರದೇಶಗಳನ್ನು ಗುರುತಿಸಿ, ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಮೂಲಕ ಜನರಿಗೆ ಅವರ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ. ಈ ಅಭಿಯಾನದ ಅಡಿಯಲ್ಲಿ ಇದುವರೆಗೆ ತಾಲೂಕಿನ ಸುಮಾರು 2,011 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಯಶಸ್ವಿಯಾಗಿ ವಿತರಿಸಿ, ಅವರ ಬದುಕಿಗೆ ಸಾಂವಿಧಾನಿಕ ಭದ್ರತೆಯನ್ನು ಒದಗಿಸಲಾಗಿದೆ.





# ಫಲಾನುಭವಿಗಳ ಮನದಾಳದ ಮಾತು

## ದಶಕಗಳ ಸಮಸ್ಯೆಗಳಿಗೆ ಮನೆಬಾಗಿಲಲ್ಲೇ ಪರಿಹಾರ



### ದಾಖಲೆಗಳ ಸರಿಪಡಿಸುವಿಕೆಯಿಂದ ಮಕ್ಕಳಿಗೆ ಆಸ್ತಿ ಹಸ್ತಾಂತರ

“ ನನಗೆ ಈಗ ಸುಮಾರು ೮೦ ವರ್ಷ ವಯಸ್ಸಾಗಿದೆ. ದಾಖಲೆಗಳು ಸರಿಯಾಗಿರದ ಕಾರಣ ಮಕ್ಕಳಿಗೆ ಜಮೀನಿನ ದಾಖಲೆಗಳನ್ನು ಮಾಡಿಕೊಡಲು ಸಾಧ್ಯವಾಗುತ್ತಿರಲಿಲ್ಲ. ಈಗ ದಾಖಲೆಗಳು ಸರಿಯಾಗಿರುವುದರಿಂದ ಮಕ್ಕಳಿಗೆ ಜಮೀನನ್ನು ಹಂಚಿಕೊಡಲು ಸಾಧ್ಯವಾಗುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ ಕೃಷಿ ಸಾಲ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ಬಹಳ ಉಪಯುಕ್ತವಾಗುತ್ತದೆ. ”

- **ಶ್ರೀ ಚನ್ನಬಸವಯ್ಯ, ಕಾಂಡ್ಲಕೆರೆ ಗ್ರಾಮ**



### ಡಿಜಿಟಲ್ ಹಕ್ಕುಪತ್ರ, ಮನೆಬಾಗಿಲಿಗೆ ಕಂದಾಯ

“ ನಮ್ಮ ಜಮೀನಿನ ದುರಸ್ತಿ ಮಾಡಿಸಿಕೊಳ್ಳಲು ನಾವು ಸುಮಾರು 30–40 ವರ್ಷಗಳಿಂದ ತಾಲೂಕು ಕಚೇರಿಗೆ ಅಲೆದಾಡುತ್ತಲೇ ಇದ್ದೆವು. ಈಗ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರ ಕಂದಾಯ ಸುಧಾರಣೆಗಳಿಂದ ಅಧಿಕಾರಿಗಳೇ ನಮ್ಮ ಮನೆಬಾಗಿಲಿಗೆ ಬಂದು, ಜಮೀನಿನ ಸಮಸ್ಯೆಗಳನ್ನು ಸ್ಥಳದಲ್ಲೇ ದುರಸ್ತಿ ಮಾಡಿ ಕೊಡುತ್ತಿದ್ದಾರೆ. ಪಹಣಿ ಅಥವಾ ಹಕ್ಕುಪತ್ರಗಳೆಲ್ಲವೂ ಈಗ ಡಿಜಿಟಲ್ ಆಗಿ, ಕಂಪ್ಯೂಟರ್ ಮೂಲಕ ತಕ್ಷಣವೇ ಕೈಗೆ ಸಿಗುತ್ತಿವೆ. ”

- **ಶ್ರೀ ನರಸಿಂಹಮೂರ್ತಿ, ಹಗಸರಹಳ್ಳಿ ಗ್ರಾಮ**

### ಅಲೆಮಾರಿ ಜೀವನದಿಂದ ಸ್ಥಿರ ನೆಲೆಗೆ

“ ನಾವು ಲಂಬಾಣಿ ಜನಾಂಗದವರು, ಹಿಂದೆ ಅಲೆಮಾರಿ ಜೀವನ ನಡೆಸುತ್ತಾ ಯಾವುದೇ ದಾಖಲೆಗಳು ಅಥವಾ ಸ್ಥಿರ ನೆಲೆ ಇಲ್ಲದೆ ಬದುಕುತ್ತಿದ್ದೆವು. ಸುಮಾರು 70–80 ವರ್ಷಗಳಿಂದ ಈ ಪ್ರದೇಶದಲ್ಲಿ ವಾಸಿಸುತ್ತಿದ್ದರೂ, ನಮ್ಮ ಊರಿಗೆ ಸರಿಯಾದ ಹೆಸರು ಇರಲಿಲ್ಲ. ಈಗ ನಮ್ಮ ‘ತಾಳಿಕಟ್ಟೆ ತಾಂಡಾ’ವನ್ನು ಕಂದಾಯ ಗ್ರಾಮವಾಗಿ ಘೋಷಿಸಿ, ‘ವಿನಾಯಕನ ತಾಂಡಾ’ ಎಂದು ಮರುನಾಮಕರಣ ಮಾಡಿಕೊಟ್ಟಿದ್ದಾರೆ. ನಮ್ಮ ಮೂವರು ಮಕ್ಕಳು ಶಾಲೆಗೆ ಹಾಗೂ ಇನ್ನಿಬ್ಬರು ಅಂಗನವಾಡಿಗೆ ಹೋಗುತ್ತಿದ್ದಾರೆ. ”

- **ಶ್ರೀಮತಿ ಜ್ಯೋತಿ, ಚಿನಾಲಿ ಕುರುಬಹಳ್ಳಿ**



### ಅನ್ನದ ಭದ್ರತೆ: ಪಡಿತರ ಚೀಟಿ ವಿತರಣೆ

“ನಮಗೆ ಮೊದಲು ಪಡಿತರ ಚೀಟಿ ಇರಲಿಲ್ಲ; ಕಳೆದ 3–4 ತಿಂಗಳಿಂದ ಊಟಕ್ಕೆ ಅಕ್ಕಿ ಇಲ್ಲದೆ ಬಹಳ ತೊಂದರೆ ಅನುಭವಿಸುತ್ತಿದ್ದೆವು. ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ನಮ್ಮ ತಾಂಡಕ್ಕೆ ಭೇಟಿ ನೀಡಿದಾಗ ಅರ್ಜಿ ಸಲ್ಲಿಸಿದ್ದೆವು, ಅವರು ಹೇಳಿದಂತೆಯೇ ಈಗ ನಮಗೆ ಪಡಿತರ ಚೀಟಿ ದೊರೆತಿದೆ.”

- **ಶ್ರೀಮತಿ ದೇವಮ್ಮ (ಗಂಗಾನಾಯಕ), ಹಾಲುಕಟ್ಟೆ**





### ರೈಲ್ವೆ ಇಲಾಖೆಯ ಬದಲು ನಮ್ಮದೇ ಹೆಸರಿನಲ್ಲಿ ಕಂದಾಯ

“ಹಿಂದೆ ನಮ್ಮ ಮನೆಗಳಿಗೆ ಕಂದಾಯ ಕಟ್ಟಲು ಸಹ ಅವಕಾಶ ಇರಲಿಲ್ಲ; ನಮ್ಮದು ಮನೆ ಎಂಬ ಗುರುತೂ ಇರಲಿಲ್ಲ. ಹಿಂದೆ ಗೊಲ್ಲರಹಟ್ಟಿ ರೈಲ್ವೆಯವರ ಹೆಸರಿನಲ್ಲಿ ಕಂದಾಯ ಕಟ್ಟಲಾಗುತ್ತಿತ್ತು. ಇವತ್ತು ನಮ್ಮ ಸಿಎಂ ಸಾಹೇಬ್ರು ನಮ್ಮನ್ನು ಗುರುತಿಸಿ, ನಮ್ಮ ಹೆಸರಿನಲ್ಲಿ ದಾಖಲೆಗಳನ್ನು ನೀಡಿದ್ದಾರೆ.”

- **ಶ್ರೀ ಸಿರಿಯಪ್ಪ, ದೊಡ್ಡರಾಮಪುರ**



### ಹಕ್ಕುಪತ್ರದಿಂದ ಅಧಿಕೃತ ಮಾನ್ಯತೆ

“ನಾವು ಬಹಳ ವರ್ಷಗಳಿಂದ ಮನೆಯಲ್ಲಿ ವಾಸವಾಗಿದ್ದರೂ, ನಮ್ಮ ಮನೆಗೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ದಾಖಲೆಗಳಿರಲಿಲ್ಲ. ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರ ‘ಕಂದಾಯ ಗ್ರಾಮ’ ಮಾಡುವ ಮಹತ್ತರ ನಿರ್ಧಾರದಿಂದ ತಹಶೀಲ್ದಾರರಾದ ಮಮತಾ ಮೇಡಂ ಅವರು ಬಹಳ ಶ್ರಮವಹಿಸಿ ನಮಗೆ ಹಕ್ಕು ಪತ್ರಗಳನ್ನು ಒದಗಿಸಿಕೊಟ್ಟಿದ್ದಾರೆ.”

- **ಶ್ರೀ ಕುಮಾರ್**

### ದಾರಿ ತೆರವು: ಕೃಷಿ ಚಟುವಟಿಕೆಗಳಿಗೆ ಜೀವಕಳೆ

“ಸರ್ವೆ ನಂಬರ್ 38 ರಲ್ಲಿ ಸುಮಾರು 15 ಅಡಿ ಆಳದಲ್ಲಿ ಟ್ರೆಂಚ್ ಮಾಡಿ ಮಣ್ಣು ತೆಗೆದಿರುವುದರಿಂದ ಸಂಚಾರಕ್ಕೆ ತುಂಬಾ ತೊಂದರೆಯಾಗಿತ್ತು ಹಾಗೂ ದಾರಿ ಇಲ್ಲದೇ ಮೋಟಾರ್ ಸಾಗಿಸಲು, ಟ್ರ್ಯಾಕ್ಟರ್ ಹೋಗಲು ಸಾಧ್ಯವಾಗುತ್ತಿರಲಿಲ್ಲ. ತಹಶೀಲ್ದಾರ್ ಅವರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಸ್ವತಃ ಸ್ಥಳಕ್ಕೆ ಬಂದು, ನಮ್ಮ ಸಮಸ್ಯೆಯನ್ನು ಮನಗಂಡು ದಾರಿ ತೆರವು ಮಾಡಿಸಿ ರೈತರಿಗೆ ಅನುಕೂಲ ಕಲ್ಪಿಸಿದ್ದಾರೆ.”

- **ಶ್ರೀ ಬಸವರಾಜು, ದೊಡ್ಡರಾಮಪುರ ಗೊಲ್ಲರಹಟ್ಟಿ**






ದೊಡ್ಡರಾಮಪುರ ಗ್ರಾಮ, ಚಿಕ್ಕನಾಯಕನಹಳ್ಳಿ ತಾಲೂಕು








ಸರ್ಕಾರಿ ಕಿರಿಯ


# ಕೃತಜ್ಞತೆಗಳು

## ಭರವಸೆಯ ನಾಳೆಗೆ ದಿಟ್ಟ ಹೆಜ್ಜೆ

ಈ ಕೃತಿ ರೂಪುಗೊಳ್ಳಲು ಅನೇಕ ಜನರ ಪರಿಶ್ರಮ, ಸಹಕಾರ ಮತ್ತು ಮಾರ್ಗದರ್ಶನ ಕಾರಣವಾಗಿದೆ. ತುಮಕೂರು ಜಿಲ್ಲೆಯ ಕಂದಾಯ ಸಮಾವೇಶವನ್ನು ಯಶಸ್ವಿಯಾಗಿ ರೂಪಿಸಿ, ಜನರ ಮನೆಬಾಗಿಲಿಗೆ ಸೇವೆಯನ್ನು ತಲುಪಿಸಿದ ಜಿಲ್ಲಾಡಳಿತದ ಎಲ್ಲಾ ಅಧಿಕಾರಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಈ ಅಭಿಯಾನದ ಹಿಂದಿರುವ ಮಾನ್ಯ ಸಚಿವರು, ಜನಪ್ರತಿನಿಧಿಗಳು, ತಹಶೀಲ್ದಾರರು, ಕಂದಾಯ ಇಲಾಖೆ ಸಿಬ್ಬಂದಿ ಹಾಗೂ ಗ್ರಾಮ ಮಟ್ಟದ ಅಧಿಕಾರಿಗಳ ಅಹೋರಾತ್ರ ಶ್ರಮವು ಈ ಪರಿವರ್ತನೆಯ ಮೂಲಶಕ್ತಿ.

ಹಾಗೆಯೇ, ತಮ್ಮ ಅನುಭವಗಳನ್ನು ಹಂಚಿಕೊಂಡ ಫಲಾನುಭವಿಗಳು ಈ ಪುಸ್ತಕಕ್ಕೆ ಜೀವ ತುಂಬಿದ್ದಾರೆ. ಅವರ ಕಥೆಗಳು ಈ ಕೃತಿಯ ಆತ್ಮವಾಗಿವೆ.

ಈ ಕೃತಿಯನ್ನು ಸಾಧ್ಯವಾಗಿಸಿದ ಪ್ರತಿಯೊಬ್ಬರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

# ಸಮಾರೋಪ

## ಭರವಸೆಯ ನಾಳೆಗೆ ದಿಟ್ಟ ಹೆಜ್ಜೆ

ಕಂದಾಯ ಸಮಾವೇಶವು ಕೇವಲ ಒಂದು ಆಡಳಿತಾತ್ಮಕ ಕಾರ್ಯಕ್ರಮವಲ್ಲ; ಇದು ಜನರ ಬದುಕಿನಲ್ಲಿ ಆಶೆಯ ಬೆಳಕು ಹಚ್ಚಿದ ಮಹತ್ವದ ಪರಿವರ್ತನೆಯ ಪಯಣವಾಗಿದೆ. ದಶಕಗಳಿಂದ ಕಾಯುತ್ತಿದ್ದ ಹಕ್ಕುಗಳು ಇಂದು ಜನರ ಕೈ ಸೇರಿ, ಅವರ ಬದುಕಿಗೆ ಭದ್ರತೆ, ಗೌರವ ಮತ್ತು ಆತ್ಮವಿಶ್ವಾಸವನ್ನು ನೀಡಿವೆ.

ಈ ಅಭಿಯಾನವು ಆಡಳಿತ ಮತ್ತು ಜನರ ನಡುವಿನ ಅಂತರವನ್ನು ಕಡಿಮೆ ಮಾಡಿ, ಸರ್ಕಾರವು ನಿಜವಾಗಿಯೂ ಜನರ ಮನೆಬಾಗಿಲಿಗೆ ತಲುಪಬಲ್ಲದು ಎಂಬುದನ್ನು ಸಾಬೀತುಪಡಿಸಿದೆ. ಭೂಮಿಯ ಮೇಲಿನ ಅಧಿಕೃತ ಹಕ್ಕು ಸಿಕ್ಕಾಗ, ಅದು ಕೇವಲ ಒಂದು ದಾಖಲೆಯಲ್ಲ; ಅದು ಒಂದು ಕುಟುಂಬದ ಭವಿಷ್ಯಕ್ಕೆ ಬುನಾದಿಯಾಗುತ್ತದೆ, ಒಂದು ಸಮುದಾಯದ ಅಭಿವೃದ್ಧಿಗೆ ದಾರಿಯಾಗುತ್ತದೆ.

ತುಮಕೂರು ಜಿಲ್ಲೆಯ ಈ ಯಶೋಗಾಥೆ, ಇಡೀ ರಾಜ್ಯಕ್ಕೆ ಮಾದರಿಯಾಗಿ ನಿಲ್ಲುತ್ತದೆ. ಇದು ಪರಿವರ್ತನೆಯ ಅಂತ್ಯವಲ್ಲ, ಬದಲಾಗಿ ಇನ್ನಷ್ಟು ಸಮಾನತೆ, ನ್ಯಾಯ ಮತ್ತು ಅಭಿವೃದ್ಧಿಯತ್ತ ಸಾಗುವ ಪ್ರಾರಂಭವಾಗಿದೆ.

**"ನಮ್ಮ ಭೂಮಿ – ನಮ್ಮ ಹಕ್ಕು, ನಮ್ಮ ಭವಿಷ್ಯ"** ಎಂಬ ಧ್ಯೇಯದೊಂದಿಗೆ, ಈ ಪಯಣ ಮುಂದುವರಿಯಲಿ ಎಂಬ ಆಶಯದೊಂದಿಗೆ ಈ ಕೃತಿ ತನ್ನ ಸಮಾರೋಪವನ್ನು ಕಂಡುಕೊಳ್ಳುತ್ತದೆ.

# ಕಲ್ಪತರು ನಾಡಿನ ಕಂದಾಯ ಪರ್ವ

ಆಡಳಿತಾತ್ಮಕ ಪರಿವರ್ತನೆಯ ಮೈಲಿಗಲ್ಲು

